ಶ್ರೀಗುರುಭ್ಯೋನಮಃ ಶ್ರೀಪರಮಗುರುಭ್ಯೋನಮಃ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯೇಭ್ಯೋ ನಮಃ
ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್
ಶ್ರೀನರಹರಿರಾಮಕೃಷ್ಣವೇದವ್ಯಾಸಾತ್ಮಕಶ್ರೀಲಕ್ಷ್ಮೀಹಯಗ್ರೀವಾಯನಮಃ
ಶ್ರೀಗುರುಭ್ಯೋನಮಃ। ಶ್ರೀರಾಘವೇಂದ್ರತೀರ್ಥಗುರುಭ್ಯೋ ನಮಃ। ಶ್ರೀವಾದಿರಾಜಗುರುಭಾರತೀರಮಣ
ಹನುಮದ್ಭೀಮಸುಮಧ್ವಹಂಸಾಯ ನಮಃ। ಶ್ರೀಮಧ್ವಾಂತರ್ಯಾಮಿನ್
ಶ್ರೀಲಕ್ಷ್ಮೀನಾರಾಯಣಾಯ ನಮಃ॥

# ಜೀವಕರ್ತೃತ್ವವಿಚಾರ.

(1)ಪರಮಾತ್ಮನೊಬ್ಬನೇ ಸ್ವತಂತ್ರನು. ಬೇರೇ ಎಲ್ಲರೂ, ಅಂದರೆ ರಮಾಬ್ರಹ್ಮಾದಿ ಸರ್ವಜೀವಕೋಟಿಯೂ, ಅಸ್ವತಂತ್ರರು ತಮ್ಮ ಇರುವಿಕೆಗೆ, ಪ್ರಮಿತಿಗೆ, ಪ್ರವೃತ್ತಿಗೆ ಸ್ವತಂತ್ರ ಪರಮಾತ್ಮನನ್ನೇ ಆಶ್ರಯಿಸಿಕೊಂಡಿದ್ದಾರೆ. ಹೀಗಿರಲು ಜೀವರುಗಳು ಕರ್ತರಲ್ಲವೆಂದೇ ಪೂರ್ವಪಕ್ಷ. ''ಸ ಹಿ ಸರ್ವಸ್ಯ ಕರ್ತಾ''; ''ನಾನ್ಯಃ ಕರ್ತಾ''; ''ನ ಋತೇ ತ್ವತ್ಕ್ರಿಯತೇ'(ನಿನ್ನ ಹೊರತು ಏನೂ ಮಾಡಲ್ಪಡುವುದಿಲ್ಲ) 'ಯಥಾ ನಿಯುಕ್ತೋಽಸ್ಮಿ'(ನೀನು ಹೇಗೆ ನಿಯೋಗಿಸಲ್ಪಡುತ್ತೀಯೋ ಹಾಗೆಯೇ ಮಾಡುತ್ತೇನೆ) ಹೀಗೆ ವಿಷ್ಣುಮಾತ್ರ ಕರ್ತೃತ್ವ ಬೋಧಿಸುವ ಶ್ರುತ್ಯನುಸಾರ ಜೀವನು ಕರ್ತನೇ ಅಲ್ಲ. ಆದ್ದರಿಂದ ಎಲ್ಲೆಲ್ಲಿ ಜೀವನು ಕರ್ತನು ಎಂದು ಹೇಳುವ ಸಂದರ್ಭಗಳಲ್ಲಿ ಮಹದಾದಿ ತತ್ವಕರ್ತೃವಾದ ಶ್ರೀಹರಿಯೇ ಕರ್ತನೆಂದು ಒಪ್ಪಿದರೆ ಲಾಘವವೂ ಇದೆ.

(2) ಕಿಂಚ ಕ್ರಿಯಾಸ್ವಾತಂತ್ರ್ಯಂ ಕರ್ತೃತ್ವಂ 'ಸ್ವತಂತ್ರ, ಕರ್ತಾ' ಇತಿ ಪಾಣಿನಿ ಸ್ಮರಣಾತ್ ಅಂದರೆ ಒಂದು ಕಾರ್ಯದಲ್ಲಿ ಕಾರಕಗಳೂ ವಿಪುಲವಾಗಿದ್ದರೂ ಯಾವ ಕಾರಕವು ಕಾರ್ಯಸಿದ್ಧಿಯಲ್ಲಿ ಮಹತ್ತರ ಪಾತ್ರವಹಿಸುತ್ತೋ ಅದನ್ನೇ ಕರ್ತಾ ಎನ್ನುತ್ತೇವೆ. ಹಾಗೆ ದೇವದತ್ತನಿಗೆ ಕರ್ತೃತ್ವವಿದೆಯೆಂದು ಕಂಡರೂ ಪರಮ ಮುಖ್ಯವಾಗಿ ಈಶ್ವರನೇ ಅತಿಶಯ ಪರಮೋಪಕಾರಿಯಾಗಿ ಕಾರ್ಯಸಿದ್ಧಿಗೆ ಕಾರಣನಾದ್ದರಿಂದ ಅವನೇ ಕರ್ತಾ; ಜೀವ ಕರ್ತನಲ್ಲವೆಂದು ನಿಗಮನ ಮಾಡಬಹುದು.

(3)''ಅನಿಚ್ಛತೋಽಪಿ ದೇಹಹಾನ್ಯಾದಿ ಯುಕ್ತ್ಯಾ'' ಅಂದರೆ ನಾವು ನಮ್ಮ ದೇಹದಲ್ಲಿ ಬಹುಕಾಲ ಜೀವಿಸಬೇಕೆಂಬ ಇಚ್ಛೆಯಿದ್ದರೂ,ಇರಲು ಸಾಧ್ಯವಿಲ್ಲ. ಮರಣ ಹೊಂದುತ್ತೇವೆ. ಯಾವಾಗಲೂ ಸುಖ ವಾಗಿರಬೇಕೆಂದು ಇಚ್ಛೆಪಟ್ಟರೂ ದುಃಖ ಹೊಂದುತ್ತೇವೆ. ರೋಗಾದಿಗಳಿಂದ ರಕ್ಷಣೆ ಪಡೆದರೂ ರೋಗ ಬರುತ್ತೆ. ಇನ್ನು ಸ್ವರೂಪೇಂದ್ರಿಯವಾದ ಸಾಕ್ಷಿಯು ''ನಾಹಂ ಸ್ವತಂತ್ರಃ'' ಎಂಬ ಅಬಾಧಿತವಾದ ಅನುಭವವೂ ಜಾಗರೂಕ ವಾಗಿದೆ.

(4)''ಏಕೋ ವಶೀ'' ಎಂಬ ಶ್ರುತಿಯಿಂದಲೂ ಕರ್ತೃಸ್ವಾತಂತ್ರ್ಯವು ಈಶಮಾತ್ರನಿಷ್ಠವೆಂದು ತಿಳಿಯುತ್ತದೆ.

(5) 'ನಾನ್ಯಃ ಕರ್ತಾ ಹರಿಃ ಕರ್ತಾ' ; ''ಓಂ ಇತರವ್ಯಪದೇಶಾದ್ಧಿತಂ ಕರಣದೋಷಪ್ರಸಕ್ತಿಃ ಓಂ''(2.1.7.22) 'ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ' (ಗೀತಾ 5.14) 'ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ' (ಜೀವನು ಜಡಕ್ಕಿಂತ ಸಮರ್ಥನಾಗಿದ್ದರೂ ಯಾರಿಂದಲೂ ಸ್ವತಂತ್ರವಾಗಿ ಕರ್ಮಮಾಡಿಸುವುದಿಲ್ಲ, ತಾನೂ ಕರ್ಮಮಾಡುವುದಿಲ್ಲ) 'ಈಶಸ್ಯ ಹಿ ವಶೇ ಲೋಕೋ ಯೋಷಾ ದಾರುಮಯೀ ಯಥಾ' (ಭಾಗ 1.6.7) 'ಯಥಾ ದಾರುಮಯೀಂ ಯೋಷಾಂ ನರಃ ಸ್ಥಿರಸಮಾಹಿತಃ ಇಂಗಯತ್ಯಂಗಮಂಗಾನಿ ತಥಾ ರಾಜನ್ ಇಮಾಃ ಪ್ರಜಾಃ' (ಭಾರತ) ಇತ್ಯಾದಿ ಪ್ರಮಾಣವಾಕ್ಯಗಳಿಂದ ಜೀವನಿಗೆ ಕರ್ತೃತ್ವವು ನಿಷೇಧಿಸಿದೆ.

(6) 'ಯಃ ಕರ್ತಾ ಸಹಿ ಭೋಕ್ತಾ' ಇತಿ ನ್ಯಾಯಾತ್ 'ಅಕರ್ತುಃ ಜೀವಸ್ಯ ಕರ್ಮಫಲವಾಪ್ತಿಃ ನ ಉಪಪದ್ಯತೇ' ಜೀವನು ಕರ್ತನಲ್ಲದಿದ್ದಮೇಲೆ ಕರ್ಮಫಲಪ್ರಾಪ್ತಿಯೂ ಕೂಡದು. ಆದ್ದರಿಂದಲೇ ವಿಧಿನಿಷೇಧರೂಪ ಶಾಸನವು ಕೂಡದು. ಇದರಿಂದ ಶಾಸ್ತ್ರವೈಯರ್ಥ್ಯವೂ ಬಂತು.

(7)ಜೀವನು ಕರ್ತನು ಎಂದು ಹೇಳುವುದಾದರೆ ಆ ಕರ್ತೃತ್ವವು ಸ್ವತಂತ್ರವೇ; ಪರತಂತ್ರವೇ. ಜೀವಕರ್ತೃತ್ವವು ಸ್ವತಂತ್ರವೆಂದು ಹೇಳಲಾಗುವುದಿಲ್ಲ. ಮೇಲ್ಕಂಡ ಶ್ರುತಿಸ್ಮೃತಿಗಳ ವಿರೋಧವು ಬರುತ್ತದೆ. ಹಾಗೂ ಹಿಂದೆ ಹೇಳಿದಂತೆ ಜೀವನ ಇಚ್ಛಾಗಳಿಗೆ ವಿರುದ್ಧವಾಗಿ ಕಾರ್ಯಗಳು ನಡೆಯುವುದನ್ನು ನೋಡಿದ್ದೇವೆ. ಇಚ್ಛೆ ಇಲ್ಲದಿದ್ದರೂ ಸಿಹಿ ಊಟ ಮಾಡುತ್ತಿದ್ದರೂ ತನ್ನ ನಾಲಿಗೆಯನ್ನು ಕಚ್ಚಿಕೊಂಡು ನೋವು ಅನುಭವಿಸುತ್ತಾನೆ. ಊಟ ಮಾಡುತ್ತಿರುವಾಗಲೇ ಸಾವು ಬರುವುದುಂಟು.

ಇನ್ನು ಜೀವನ ಕರ್ತೃತ್ವವು ಪರತಂತ್ರವೇ ಎಂದರೆ? (ಅ)ಸ್ವಾಮಿಯು ಭೃತ್ಯನನ್ನು ಪ್ರೇರಿಸುವಂತೆ ಹೊರಗಡೆಯಿಂದ ಪರಮಾತ್ಮನಿಂದ ಪ್ರೇರಿಸಲ್ಪಡುವಿಕೆಯೋ ಅಥವಾ (ಆ) ನಾಟಕದ ಸೂತ್ರಗೊಂಬೆಯಂತೆ ಪೂರ್ತಿ ಪರಾಧೀನ -ತೆಯೋ.

ಮೊದಲನೆಯ ಪಕ್ಷವು ಕೂಡದು. ' ಯ ಆತ್ಮಾನಮಂತರೋ ಯಮಯತಿ' (ಎಂದರೆ ಪರಮಾತ್ಮನು ಜೀವಾತ್ಮನ ಹೃದಯಗುಹಾವರ್ತಿಯಾಗಿ ಪ್ರೇರಿಸುತ್ತಾನೆಂದಿದೆ) ಎಂಬ ಶ್ರುತಿವಿರೋಧವು ಬರುತ್ತೆ. ಇನ್ನು ಎರಡನೆಯ ಪಕ್ಷದಲ್ಲಿಯಾದರೋ, ಜೀವನು ಜಡಸದೃಶನಾಗಿ ಅಕರ್ತನೇ ಆಗುತ್ತಾನೆ. ಆಗ ಜೀವನು ವಿಧಿನಿಷೇಧಗಳಿಗೆ ಅವಿಷಯನಾಗುತ್ತಾನೆ ಮತ್ತು 'ಯತ್ಕರ್ಮಕುರುತೇ ತದಭಿಸಂಪದ್ಯತೇ'(ಜೀವನು ಯಾವ ಕರ್ಮವನ್ನು ಮಾಡುತ್ತಾನೋ ಅದರ ಫಲ ಪಡೆಯುತ್ತಾನೆ) ಎಂದು ಜೀವನಿಗೆ ಕರ್ತೃತ್ವಹೇಳುವ ಶ್ರುತಿಯು ಅಪ್ರಮಾಣ ವಾಗಬೇಕಾಗುತ್ತೆ.

ಹೀಗೆ ಮೇಲೆ ಹೇಳಿದಂತೆ ಶೃತಿ, ಸ್ಮೃತಿ, ಪ್ರತ್ಯಕ್ಷ, ಅನುಮಾನರೀತ್ಯಾ ಈಶ್ವರನಿಗೆ ನಿರವಧಿಕಸ್ವಾತಂತ್ರ್ಯಕರ್ತೃತ್ವವು ಇದೆ. ಈ ಬಗ್ಗೆ ವಿಪ್ರತಿಪತ್ತಿ ಇಲ್ಲ. ಇನ್ನು ಜೀವನಿಗೂ ಕರ್ತೃತ್ವ ಇದೆ ಎಂಬಲ್ಲಿ ಪ್ರಮಾಣಗಳಿವೆ. (ಅ)ಕರ್ತಾ ವಿಜ್ಞಾನಾತ್ಮಾ ಪುರುಷಃ, ಯತ್ಕರ್ಮಕುರುತೇ ತದಭಿಸಂಪದ್ಯತೇ' (ಆ)'ಜಕ್ಷನ್ ಕ್ರೀಡನ್ ರಮಮಾಣಃ ಆತ್ಮಾನಮೇವ ಲೋಕಮುಪಾಸೀತ'(ಮೋಕ್ಷದಲ್ಲಿಯೂ ಮುಕ್ತಜೀವನು ಸ್ವರೂಪಾನಂದವನ್ನು ಭೋಜನ ಮಾಡುತ್ತಾ ಆನಂದಾನುಭವಿಯಾಗಿರುತ್ತಾನೆ) (ಇ) 'ಆತ್ಮಾನಮೇವ ಲೋಕಮುಪಾಸೀತ' ಇತ್ಯಾದಿ ಮೋಕ್ಷಾದ್ಯರ್ಥ ಶ್ರವಣ, ಮನನ, ನಿಧಿಧ್ಯಾಸನ ರೂಪ ಸಾಧನಕ್ರಿಯಾಗಳು ಹೇಳಿವೆ. (ಈ) 'ಅಹಂ ಕರೋಮಿ' ಎಂಬ ಅಬಾಧಿತ ಸಾಕ್ಷಿಪ್ರತ್ಯಕ್ಷವು ಜಾಗ್ರತವಾಗಿದೆ. (ಉ) 'ಜೀವ ಚೇತನಃ ಜ್ಞಾನಕ್ರಿಯಾವಾನ್ ಕರ್ಮಫಲಭೋಕ್ತೃತ್ವಾತ್' ಏಕೆಂದರೆ 'ಯಃ ಕರ್ತಾ ಸ ಭೋಕ್ತಾ'. ನಾನು ಕರ್ಮಫಲವನ್ನು ಅನುಭವಿಸುತ್ತೇನೆ ಎಂಬ ಸಾಕ್ಷಿಯ ಅನುಭವದಿಂದ ಕರ್ಮಫಲಭೋಕ್ತೃತ್ವ ಹೇತುವು ಅಸಿದ್ಧ್ಯಾದಿದೋಷಗಳಿಲ್ಲವೆಂದು ತಿಳಿಯುತ್ತೆ. ಜೀವನು ಕರ್ತನಲ್ಲವೆಂದಾದರೆ ವಿಧಿನಿಷೇಧರೂಪ ಶಾಸ್ತ್ರವೈಯರ್ಥ್ಯಾಪತ್ತೇಃ' ವಿಧಿನಿಷೇಧಗಳು ಸ್ವತಂತ್ರಪುರುಷ ಈಶ್ವರನಿಗೆ ಇಲ್ಲ. ಅವನಿಗೂ ಕರ್ಮಬದ್ಧತೆ ಇದ್ದಿದ್ದರೆ ಅವನು ಅಸ್ವತಂತ್ರನಾಗಿ ಅವನ ಈಶ್ವರತ್ವಕ್ಕೆ ಭಂಗ ಬರುತ್ತೆ. ಅವನು ಕರ್ಮಫಲಭೋಕ್ತೃವಲ್ಲದಿರುವುದರಿಂದಲೇ ಈಶ್ವರನು. ಇನ್ನು ಜಡಪದಾರ್ಥಗಳಿಗೆ ಜ್ಞಾನ, ಇಚ್ಛಾದಿಗಳು ಇಲ್ಲದ್ದರಿಂದ ವಿಧಿ ನಿಷೇಧರೂಪಶಾಸ್ತ್ರವು ಅವಕ್ಕೆ ಇಲ್ಲ. ಇನ್ನು ಜೀವನಿಗೇ ಶಾಸ್ತ್ರಸಂಬಂಧಿವಿಧಿನಿಷೇಧಗಳು ಇವೆಯೆಂದು ಸಿದ್ಧಿಸುತ್ತೆ. ಹಾಗೆ ಜೀವನು ಕರ್ತನಲ್ಲದಿದ್ದರೆ ವೇದ

ಮುಂತಾದ ಶಾಸ್ತ್ರಗಳೆಲ್ಲವೂ ಅರಣ್ಯರೋದನ ವಾಗುತ್ತವೆ. ಆದ್ದರಿಂದ ಜೀವನೇ ಶಾಸ್ತ್ರಗಳಲ್ಲಿ ಹೇಳಿರುವ ವಿಧಿನಿಷೇಧಗಳಿಗೆ ವಿಷಯನು. ಅವನೇ ಕರ್ತಾ ವಿಧಿನಿಷೇಧಶಾಸ್ತ್ರರೂಪವಿಷಯಃ' ಎಂದೇ ಹೇಳಬೇಕು. ಜೀವನು ಕರ್ತನಾದ ಮೇಲೆ ಅವನ ಕರ್ತೃತ್ವ ಎಂತಹದು? ಪರತಂತ್ರಕರ್ತನೆಂದೇ ಹೇಳಬೇಕು. ಹೇಗೆ ಎಂದರೆ,++ಜೀವನು ಕರ್ತನಾದರೂ ಜೀವರುಗಳ ಸ್ವರೂಪಯೋಗ್ಯತಾಭೇದೇನ ಕರ್ತೃತ್ವದಲ್ಲಿಯೂ ವೈಚಿತ್ರ್ಯವಿದೆ. ಪ್ರತಿ ಜೀವನನಲ್ಲಿಯೂ ಅವನದೇ ಆದ ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳಿವೆ. ಈಶ್ವರನು ಇದರ ಜೊತೆಗೆ ಜೀವರ ಪೂರ್ವಕರ್ಮಕೃತ ಪುಣ್ಯಪಾಪಗಳನ್ನು, ಜೀವರ ಪ್ರಯತ್ನ ಅನೇಕ ಜನ್ಮಾರ್ಜಿತ ಸಂಸ್ಕಾರವನ್ನೂ ತನ್ನ ಅಧೀನ ಸಾಧನವನ್ನಾಗಿ ಜೀವನ ಕ್ರಿಯಾಶಕ್ತಿಯನ್ನು ಉದ್ಬೋದನ ಮಾಡಿ ಎಲ್ಲವನ್ನೂ ಅವನಿಂದ ಮಾಡಿಸುತ್ತಾನೆ. ಜೀವನು ಹೀಗೆ ಈಶ್ವರನಿಂದ ಪ್ರೇರಿತನಾಗಿ ಮಾಡುವುದರಿಂದ ಎಲ್ಲವೂ ಮುಖ್ಯತಃ ಈಶ್ವರಕೃತವೆಂದು 'ಯೇನ ವಿನಾ ತೃಣಮಪಿ ನ ಚಲತಿ' ಇತ್ಯಾದಿ ರೀತಿಯಾಗಿ ಶಾಸ್ತ್ರದಲ್ಲಿ ನಿರ್ಣಯ ಮಾಡಿರುತ್ತಾರೆ. ಹಾಗೆಯೇ 'ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ' 'ನಾನು ಹೇಗೆ ಈಶ್ವರನಿಂದ ನನ್ನ ಕರ್ಮಾನುಸಾರ ಪ್ರೇರಿಸಲ್ಪಡುತ್ತೇನೋ ಹಾಗೇ ಮಾಡುತ್ತೇನೆ. ನನ್ನ ಸ್ವತಂತ್ರತೆ ಏನೂ ಇಲ್ಲ'. ಹೀಗೆ ಜೀವನಿಗೆ ಸಾಕ್ಷಿಸಿದ್ಧ ಅನುಭವ ಇರುತ್ತೆ. ಈ ದಿಕ್ಕಿನಲ್ಲಿ ಜೀವನು ಕರ್ತನಲ್ಲವೆಂದೂ ಶಾಸ್ತ್ರದಲ್ಲಿ ಹೇಳಿರುತ್ತದೆಯೇ ವಿನಹ ಜೀವನು ಸರ್ವಥಾ ಕರ್ತನಲ್ಲವೆಂದಲ್ಲ. ಅನನ್ಯಾಧೀನತಾರೂಪ ಕ್ರಿಯಾಸ್ವಾತಂತ್ರ್ಯವಿಲ್ಲವೆಂದು ಅರ್ಥವೇ ವಿನಹ ಬೇರೇ ಅಲ್ಲ. 'ಸ್ವಾತಂತ್ರ್ಯಭಾವಾಪೇಕ್ಷಯೈವ ಅಕರ್ತೃತ್ವಂ' ಎಂದು ಗೀತಾಭಾಷ್ಯದಲ್ಲಿ ಹೇಳಿದ್ದಾರೆ. ಆದ್ದರಿಂದ ಜೀವನು ತಾನು ಏನೇನು ಕರ್ಮವನ್ನು ಸ್ವತಂತ್ರ ಶ್ರೀಹರಿಯ ಪ್ರೇರಣೆಯಿಂದ ಮಾಡಿರುತ್ತಾನೆಯೋ ಅದಷ್ಟು ಅವನದೇ ಕರ್ಮ. ಅದಕ್ಕೆ ಸಂಬಂಧಿಸಿದ ಪುಣ್ಯಪಾಪಗಳಿಗೆ ಅವನೇ ಹೊಣೆ. ಅದರ ಫಲಭೋಕ್ತೃ ಅವನೇ ಶಾಸ್ತ್ರದ ವಿಧಿನಿಷೇಧಗಳಿಗೆ ವಿಷಯನು. ಪರಮಾತ್ಮನು ಆದ್ದರಿಂದ ವಿಧಿನಿಷೇಧಗಳಿಗೆ ವಿಷಯ ನಲ್ಲ. ಕರ್ಮಫಲಭೋಕ್ತೃವಲ್ಲದಿದ್ದರಿಂದಲೇ ಪರಮಾತ್ಮನು ಅಕರ್ತನೆಂದು ಕರೆಯಲ್ಪಟ್ಟಿದೆ.

1))ಶಂಕೆ:- ಕ್ರಿಯಾಸ್ವಾತಂತ್ರ್ಯವೇ ಕರ್ತೃತ್ವವೆಂದು ಪ್ರಸಿದ್ಧಿ ಇರುವಾಗ ಜೀವನ ಮಾಡುವ ಕರ್ಮಗಳಿಗೆ ಸ್ವಾತಂತ್ರ್ಯವಿಲ್ಲವೆಂದಮೇಲೆ ಅವನು ಕರ್ತಾ ಹೇಗೆ?

ಉತ್ತರ:- ಜೀವನ ಪ್ರಯತ್ನ ಈಶ್ವರಾಧೀನವಾದರೂ, ಪ್ರಯತ್ನಕ್ಕೆ ಬೇಕಾದ ಇಚ್ಛಾಶಕ್ತಿ ಜ್ಞಾನಶಕ್ತಿಯನ್ನು ಉಂಟುಮಾಡಿಯೇ ಕರ್ಮಮಾಡಿಸುತ್ತಾನಾಗಿ ಜೀವನ ಪ್ರಯತ್ನವು ಜೀವನ ಇಚ್ಛಾ ಅಧೀನವಾಗಿಯೇ ಇದೆ. ಎಂದರೆ 'ಸ್ವೇಚ್ಛಾಧೀನ ಪ್ರವೃತ್ತ್ಯಾದಿಮತ್ತ್ವಂ ಕರ್ತೃತ್ವಂ' ಎಂಬ ಕರ್ತೃತ್ವ ಅನುಭವ ತಂದು ಕೊಟ್ಟೇ ಜೀವನಿಂದ ಕರ್ಮಮಾಡಿಸುತ್ತಾನೆ. ಆದ್ದರಿಂದ ಜೀವನು ಕರ್ತನೇ ಹೌದು.

2))ಶಂಕೆ:- ಜೀವನು 'ಅಹಂ ಕರಿಷ್ಯಾಮಿ' ಎಂದು ಇಚ್ಛೈಸಿದರೂ ಎಷ್ಟೋ ಸಲ ಪ್ರಯತ್ನಮಾಡಲಾಗುವುದಿಲ್ಲ. 'ಅಹಂ ನ ಕರಿಷ್ಯಾಮಿ' ಎಂದು ಕರ್ಮದಲ್ಲಿ ಇಚ್ಛಾ ತೋರಿಸದಿದ್ದರೂ ಪ್ರಯತ್ನ ಉಂಟಾಗಿ ಕಾರ್ಯ ನಡೆದೇ ಹೋಗುತ್ತೆ. ಆದ್ದರಿಂದ 'ಸ್ವೇಚ್ಛಾಧೀನ ಪ್ರವೃತ್ತ್ಯಾದಿಮತ್ತ್ವಂ ಕರ್ತೃತ್ವಂ' ಎಂಬ ಲಕ್ಷಣವೇ ಸರಿ.

ಉತ್ತರ:- ಈ ಆಕ್ಷೇಪ ಸರಿಯಲ್ಲ. ಜೀವನಿಗೆ ತನ್ನ ಇಚ್ಛಾಧೀನನಾಗಿಯೇ ಕರ್ಮಪ್ರವೃತ್ತಿಯು. ಜೀವನು ಯಾವಾಗ ಕಾರ್ಯಮಾಡುವುದಿಲ್ಲವೆಂದು ನಿರ್ಧರಿಸುತ್ತಾನೋ ಆಗ ಇಚ್ಛೆಯಿರುವುದರಿಂದಲೇ ಪ್ರವೃತ್ತಿ ಕಂಡಿದೆ. ಹಾಗೆ ಜೀವನಿಗೆ ಇಚ್ಛೆಯಿಲ್ಲದಿದ್ದರೂ ಕಾರ್ಯ ನಡೆದಿದೆಯೆಂದರೆ (ಕಾರಣವಿಲ್ಲದಿದ್ದರೂ ಕಾರ್ಯವಾಗುವುದು, ಕಾರಣವಿದ್ದು ಕಾರ್ಯವಾಗದಿರುವುದು) ಜೀವನಿಗೆ ಪ್ರವೃತ್ತಿ,ಕಾರ್ಯಗಳಲ್ಲಿ ಸ್ವಾತಂತ್ರ್ಯವಿಲ್ಲವೆಂದು ತಿಳಿಸುತ್ತವೆಯೇ ಹೊರತು ಇಚ್ಛಾಧೀನ ಪ್ರಯತ್ನ ಎಂಬ ನ್ಯಾಯಕ್ಕೆ ಚ್ಯುತಿಯಿಲ್ಲ. ಜೀವನಿಗೆ ಇಚ್ಛೆಯಿಲ್ಲದಿದ್ದರೂ ಈಶ್ವರನು ಜೀವನಲ್ಲಿ ಇಚ್ಛೆಯನ್ನು ಹುಟ್ಟಿಸಿಯೇ ಪ್ರಯತ್ನಮಾಡಿಸುತ್ತಾನೆ. ಕೆಲವೊಮ್ಮೆ ಜೀವನ ಇಚ್ಛಾ ಇಲ್ಲದಿದ್ದರೂ ಪರಮಾತ್ಮ ತನ್ನ ಇಚ್ಛೆಯಿಂದಲೇ ಪ್ರಯತ್ನ ಜೀವನಲ್ಲಿ ಮಾಡಿಸುತ್ತಾನೆ. ಜೀವನಿಗೆ ಇಚ್ಛೆ ಉಂಟಾದಾಗ ಪ್ರಯತ್ನ ಎಂದು ಸಾಮಾನ್ಯ ನಿಯಮ. ಜೀವನಿಗೆ ಇಚ್ಛೆಯಿಲ್ಲದಿದ್ದಾಗಲೂ ಈಶ್ವರನೇ ಜೀವನಲ್ಲಿ ಪ್ರಯತ್ನ ಉಂಟುಮಾಡುತ್ತಾನೆಂದು ಅಪವಾದ ವಿಶೇಷನಿಯಮ. ಜೀವನಿಗೆ ಇಚ್ಛೆಯಿದ್ದಾಗಲೂ ಕಾರ್ಯವಾಗದಿದ್ದಾಗ, ಜೀವನ ಇಚ್ಛೆಗೆ ಮತ್ತು ಕಾರ್ಯಕ್ಕೆ ಪ್ರೇರಕವಾದ ಈಶ್ವರನ ಇಚ್ಛೆ ಮತ್ತು ಪ್ರಯತ್ನಗಳಿಲ್ಲದಿದ್ದರಿಂದ ಕಾರ್ಯವಾಗಿಲ್ಲ ಎಂದು ತಿಳಿಯಬೇಕು. ಈಶ್ವರನಿಗೂ ಇಚ್ಛಾಪ್ರಯತ್ನಗಳಿದ್ದಾಗ ಜೀವನಲ್ಲಿಯೂ ಇಚ್ಛಾಪ್ರಯತ್ನಗಳುಂಟಾಗುತ್ತವೆ. ಈ ಬಗ್ಗೆ ಗೀತಾವಾಕ್ಯ ಹೀಗಿದೆ. 'ಯದಹಂಕಾರಮಾಶ್ರಿತ್ಯ ನ ಯೋತ್ಸ್ಯೇ ಇತಿ ಮನ್ಯಸೇ। ಮಿಥ್ಯೈವ ವ್ಯವಸಾಯಸ್ತೇ ಪ್ರಕೃತಿಸ್ತ್ವಾಂ ನಿಯೋಕ್ಷ್ಯಸೇ। ಸ್ವಭಾವಜೇನ ಕೌಂತೇಯ ನಿಬದ್ಧಃ ಸ್ವೇನ ಕರ್ಮಣಾ। ಕರ್ತುಂ ನೇಚ್ಛಸಿ ಯನ್ಮೋಹಾತ್ ಕರಿಷ್ಯಸ್ಯವಶೋಽಪಿತತ್। ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ।'' ಈಶ್ವರನಿಗೆ ಇಚ್ಛಾಪ್ರಯತ್ನಗಳಿದ್ದಾಗ ಜೀವನಲ್ಲಿಯೂ ಇಚ್ಛಾಪ್ರಯತ್ನಗಳು ಉಂಟಾಗಿ ಕಾರ್ಯವಾಗುತ್ತದೆ. ಜೀವನ ಯೋಗ್ಯತೆಯನ್ನು ಅನುಸರಿಸಿ ಈಶ್ವರ ಇಚ್ಛಾಪ್ರಯತ್ನವನ್ನು ಮಾಡುತ್ತಾನೆ. ಆದ್ದರಿಂದಲೇ ಕಡೆಯಲ್ಲಿ ಅರ್ಜುನನು ''ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದೇನ ಕೇಶವ। ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ'' ಎಂದು ತನ್ನ ನಿಶ್ಚಯವನ್ನು ಹೇಳಿರುತ್ತಾನೆ.

(2) ಶ್ರೀವೇದವ್ಯಾಸರು ''ಓಂ ಇತರವ್ಯಪದೇಶಾತ್ ಓಂ'' ಎಂಬ 2-1-22 ಸೂತ್ರದಲ್ಲಿ ಜೀವನಿಗೆ ಕರ್ತೃತ್ವನಿಷೇಧ ಮಾಡಿರುವುದರ ಅಭಿಪ್ರಾಯವನ್ನು ''ಓಂ ಉಪಲಬ್ಧಿವದನಿಯಮಃ ಓಂ'' ಎಂಬ 2-3-37ರ ಸೂತ್ರದಲ್ಲಿ ತಿಳಿಸಿರುತ್ತಾರೆ. ಅದರಂತೆ ಜೀವನಿಗೆ 'ತನ್ನ ಹಿತವನ್ನು ತಾನು ಮಾಡಿಕೊಳ್ಳಲಾಗದಿರುವುದು. ತನ್ನ ಇಷ್ಟಕ್ಕೆ ವಿರುದ್ಧ ಅಹಿತವನ್ನು ಮಾಡಿಕೊಳ್ಳುವುದು'. ಇಂಥ ದೋಷವನ್ನು ಹೇಳಿದ್ದರಿಂದ ತಾನು ಸ್ವತಂತ್ರಕರ್ತನಲ್ಲವೆಂದು ತಿಳಿಸಲು ಹಾಗೂ ಪರಮಾತ್ಮನೇ ಸ್ವತಂತ್ರಕರ್ತನೆಂದು ಹೇಳುವುದೇ ಆಗಿದೆ. ಆದುದರಿಂದ ಜೀವನಿಗೆ ಕರ್ತೃತ್ವವುಂಟು. ಅದು ಪರಮಾತ್ಮನ ಇಚ್ಛೆಗೆ ಅಧೀನವಾಗಿದೆ.

3))ಶಂಕೆ:-ಜೀವನು 'ಅಸ್ವತಂತ್ರಕರ್ತಾ' ಎಂದಾದರೆ ಅವನು ಕರ್ತಾ ಎಂದು ಹೇಗೆ ಹೇಳುವುದು? ಅಧೀನ ಕರ್ತೃತ್ವ ಎಂದರೆ ಕರ್ತಾ ಅಲ್ಲ ಎಂದೇ ಅರ್ಥ.

ಉತ್ತರ:-ಇದು ಸರಿಯಲ್ಲ. ಬಡಗಿಯು ಯಜಮಾನನ ಆಳ್ವಿಕೆಗೆ ಒಳಪಟ್ಟು ವೇತನವನ್ನು ಪಡೆದು ಕೆಲಸ ಮಾಡುವುದರಿಂದ ತನ್ನ ಕರ್ತೃತ್ವ ಶಕ್ತಿಯನ್ನು ಕಳೆದುಕೊಳ್ಳುವುದಿಲ್ಲ. ಯಜಮಾನನಿಗೆ ನಿಯಮವಾಗಿ ಅಧೀನ ನಾದರೂ ತನ್ನ ಕಸುಬಿನ ಕೆಲಸವನ್ನು ಸ್ವತಂತ್ರವಾಗಿಯೇ ಮಾಡುತ್ತಾನೆ. ಇದಕ್ಕೆ ಅಸ್ವತಂತ್ರಕರ್ತನೆಂದು ಹೇಳಬಹುದು. ಹಾಗೆಯೇ ಜೀವನು ಈಶ್ವರನಿಗೆ ಅಧೀನನೂ ಆಗಿ, ಕರ್ತನೂ ಆಗಿದ್ದಾನೆ. ''ಓಂ ಯಥಾ ಚ ತಕ್ಷೋಭಯಥಾ ಓಂ'' 2-3-40 ಸೂತ್ರವು ಪರಿಹಾರ ಮಾಡಿದೆ.

4)) ಒಂದೇ ಕ್ರಿಯೆಗೆ ಈಶ್ವರನೂ ಕರ್ತಾ, ಜೀವನೂ ಕರ್ತಾ ಹೇಗೆ ಸರಿ?

ಉತ್ತರ:-ಲೋಕದಲ್ಲಿ, ಜಾತ್ರೆಯಲ್ಲಿ ರಥವನ್ನು ಎಳೆಯುವುದು, ಮನೆ ಕಟ್ಟುವುದು, ಇತ್ಯಾದಿಗಳಲ್ಲಿ ಕ್ರಿಯೆಯು ಅನೇಕ ಕರ್ತೃಕವಾಗಿ ನಡೆಯುತ್ತಿವೆ.

ಯಜಮಾನ ಮುಖ್ಯಕರ್ತನಾದರೂ ಅನೇಕಕರ್ತೃಗಳೂ ಇದ್ದಾರೆ. ಹಾಗೆಯೇ ಈಶ್ವರನು ಮುಖ್ಯಸ್ವತಂತ್ರಕರ್ತನು, ಜೀವರುಗಳು ಅಸ್ವತಂತ್ರಕರ್ತೃಗಳು. ಇಲ್ಲಿ ಮುಖ್ಯವಾಗಿ ನೆನಪಿನಲ್ಲಿಡಬೇಕಾದ ವಿಷಯವೇನೆಂದರೆ, ಎಲ್ಲಾ ಕಾರ್ಯವೂ ಜೀವರುಗಳ ಸಹಾಯವಿಲ್ಲದೇ ಈಶ್ವರನೊಬ್ಬನೇ ನಿರ್ವಹಿಸಲು ಸಮರ್ಥ ನಾದರೂ ಜೀವರುಗಳಿಗೆ ಅವರವರ ಗತಿ ಕೊಡುವುದಕ್ಕೋಸ್ಕರ ಅವರವರಲ್ಲಿ ನಿಂತು, ಪ್ರೇರಣೆ ಮಾಡಿ, ಅವರ ಯೋಗ್ಯತಾನುಸಾರ ಕೆಲಸ ಮಾಡಿಸಿ ಪುಣ್ಯಪಾಪಗಳಿಗೆ ಭಾಗಿಗಳನ್ನಾಗಿ ಮಾಡಿ ಅವರವರ ಗತಿಗೆ ಕಾರಣನಾಗುತ್ತಾನೆ.

5)) ಶಂಕೆ:- ಈಶ್ವರನು ಮುಖ್ಯಕರ್ತಾ, ಜೀವರುಗಳು ಅಧೀನ ಕರ್ತರು ಎಂದಾದರೆ, ಲೋಕದಲ್ಲಿ ಹೇಗೆ ಯಜಮಾನನೂ, ನೌಕರರೂ ಇಬ್ಬರೂ ಫಲಭೋಗಿಗಳೋ ಹಾಗೆಯೇ ಈಶ್ವರನೂ ಪುಣ್ಯಪಾಪಗಳಿಗೆ ಬದ್ಧನಾಗಿ ವಿಧಿನಿಷೇಧರೂಪ ಶಾಸ್ತ್ರದ ಕಟ್ಟುಪಾಡಿಗೆ ಒಳಪಟ್ಟವನಾಗಲಿಲ್ಲವೇ?

ಉತ್ತರ: ಈ ಆಕ್ಷೇಪ ಸರಿಯಲ್ಲ. ವಿಧಿನಿಷೇಧ ಬದ್ಧತೆಯು ಅಸ್ವತಂತ್ರಕರ್ತೃಗಳಾದ ಜೀವರುಗಳಿಗೆ ಬರುತ್ತದೆಯೇ ಹೊರತು, ಸ್ವತಂತ್ರಕರ್ತೃವಿಗೆ ಇಲ್ಲ. ಹಾಗೆ ವಿಧಿ ನಿಷೇಧಗಳಿಗೆ ಬದ್ಧನಾದರೆ ಅಸ್ವತಂತ್ರಕ್ಕೆ ಬಂದು ತನ್ನ ಈಶ್ವರತ್ವಕ್ಕೆ ಹಾನಿಯಾಗುತ್ತೆ. ಆದ್ದರಿಂದ ಈಶ್ವರನು ಸ್ವತಂತ್ರನಾಗಿರುವುದರಿಂದಲೇ ವಿಧಿನಿಷೇಧಕ್ಕೆ ವಿಷಯನಲ್ಲ.

6))ಶಂಕೆಃ- ಹಾಗಾದರೆ ಜೀವನಿಗೆ ತಾನೇ ಏಕೆ ವಿಧಿನಿಷೇಧಬದ್ಧತೆ? ಏಕೆಂದರೆ ಜೀವನ ಸರ್ವಕ್ಕೂ ಈಶ್ವರನೇ ಕಾರಣನಷ್ಟೆ. ಅಂದರೆ ಜೀವನು ಜಡತುಲ್ಯನಾದನು. ಹೀಗಿರಲು ಜೀವನು ವಿಧಿವಿಷಯನು ಆಗಲಾರನು.

ಉತ್ತರಃ- ಜೀವನು ಜಡನಲ್ಲ. ಚೇತನನು. ''ಜ್ಞಾನ ಇಚ್ಛಾಕ್ರಿಯಾವಾನ್'' ಕ್ರಿಯೆಯಲ್ಲಿ 'ಸ್ವಾತಂತ್ರ್ಯ' ವಿಲ್ಲವೆಂದು ಹೇಳಿದ್ದೇವೆಯೇ ವಿನಹ ಅವನು ಕರ್ತನೇ ಅಲ್ಲವೆಂದು ಹೇಳಿಲ್ಲ. ''ನಾನು ವಿಷಯವನ್ನು ತಿಳಿದಿದ್ದೇನೆ. ಈ ಕೆಲಸವನ್ನು ಮಾಡಬಲ್ಲೆ. ಶಕ್ತಿ ಇದೆ. ನಾನು ಈ ಕಾರ್ಯಕ್ಕಾಗಿ ಪ್ರಯತ್ನಿಸುತೇನೆ'' ಹೀಗೆ ಕರ್ತೃತ್ವವು ಅವನಿಗೆ ಅನುಭವಸಿದ್ಧವಾಗಿದೆ. ''ನಾನು ತಿಳಿಸಿ, ಬಯಸಿ ಪ್ರಯತ್ನಿಸಿ ಈ ಕಾರ್ಯವನ್ನು ಮಾಡುತ್ತೇನೆ'' ಹೀಗೆ ಜ್ಞಾನ ಇಚ್ಛಾಪೂರ್ವಕ ಪ್ರಯತ್ನವೇ ಕರ್ತೃತ್ವವು. ಇದು ಎಲ್ಲಾ ಚೇತನಸಮುದಾಯಕ್ಕೂ ಉಂಟು. ಜಡಕ್ಕೆ ಇರುವುದಿಲ್ಲ. ಜಡದಿಂದ ಅತ್ಯಂತ ವಿಲಕ್ಷಣನು ಜೀವ. ಆದ್ದರಿಂದಲೇ ಅವನಿಗೆ ವಿಧಿನಿಷೇಧಕ್ಕೆ ಒಳಪಟ್ಟವನು. ''ಯೋ ಅಹಂ ಇತಿ ವೇದ್ಯಃ ಸ ಜೀವ ಇತಿ ಕೀರ್ತಿತಃ। ಸ ಸುಖೀ ಚ ದುಃಖೀ ಚ ಸ ಪಾತ್ರಂ ಬಂಧಮೋಕ್ಷಯೋಃ'' ''ಅದುಃಖಂ ಇತರತ್ ಸರ್ವಂ ಜೀವಾ ಏವತು ದುಃಖಿನಃ। ತೇಷಾಂ ದುಃಖಂ ಪ್ರಹರಣಾಯ ಶ್ರುತಿರೇಷಾ ಪ್ರವರ್ತತೇ''. ಇಂಥವನು ಜಡ ಹೇಗೆ? ಆದರೆ ಜೀವನು ಇಚ್ಛೆಪಟ್ಟಂತೆ, ಅದರಂತೆ ಪ್ರಯತ್ನವೂ ನಡೆದೂ ಸಹ, ಕಾರ್ಯ ಕೈಗೂಡುವಂತಿಲ್ಲ. ಈ ರೀತಿಯಾಗಿ ತಾನು ಇಚ್ಛಿಸಿದಂತೆ ಪ್ರಯತ್ನ ಉಂಟಾಗಿ ಫಲಲಾಭವಾಗುವುದಿಲ್ಲವಾದ್ದರಿಂದ ಜೀವನಲ್ಲಿ ನಿಯತವಾದ ಸ್ವತಂತ್ರಕರ್ತೃತ್ವವಿಲ್ಲವೆಂದು ನಿರ್ಣಯ ಮಾಡಬಹುದು. ಈಶ್ವರನ ನಿಯಂತ್ರಣಕ್ಕೆ ಒಳಪಟ್ಟವನೆಂದು ತಿಳಿಯುತ್ತೆ. ಮತ್ತೆ ತನ್ನ ಇಚ್ಛಾನುಸಾರವಾಗಿ ಪ್ರಯತ್ನದಿಂದ ಕಾರ್ಯಸಾಫಲ್ಯ ಕಂಡಾಗ 'ತಾನು ಪರಮಾತ್ಮನ ಇಚ್ಛಾನುಸಾರಿ ನನ್ನ ಇಚ್ಛೆಯು ಇದ್ದುದರಿಂದ ಕಾರ್ಯ ಸಿದ್ಧಿಸಿತು'' ಎನ್ನುವ ನಿರ್ಣಯಕ್ಕೆ ಬಾರದೇ, ''ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ''. ಇದನ್ನೇ ಶಾಸ್ತ್ರದಲ್ಲಿ ಭ್ರಾಂತಿ, ಮೋಹವೆಂದು ಹೇಳಿದ್ದಾರೆ. ''ತತ್ರೈವಂ ಸತಿ ಕರ್ತಾರಂ ಆತ್ಮಾನಂ ಕೇವಲಂ ತು ಯಃ। ಪಶ್ಯತ್ಯಕೃತ ಬುದ್ಧಿತ್ವಾತ್ ನ ಸ ಪಶ್ಯತಿ ದುರ್ಮತಿಃ'' ಎಂದು ಗೀತಾ 18.16ರಲ್ಲಿದೆ. ಆದ್ದರಿಂದ ಜೀವನು ಅಸ್ವತಂತ್ರನೂ ಹೌದು, ಕರ್ತನೂ ಹೌದು. ಇದನ್ನು ತಿಳಿಸಿಕೊಡಲು 'ಓಂ ಯಥಾಚಕ್ಷೋಭಯಥಓಂ' 2.3.40 ಎಂಬ ಸೂತ್ರವು ಹೊರಟಿದೆ.

7)) ಶಂಕೆ:- ಹಾಗಾದರೆ ಜೀವನ ಕರ್ತೃತ್ವವು ರಾಜಾಧೀನ ಸೇವಕನ ಕರ್ತೃತ್ವದಂತೆಯೋ?

ಉತ್ತರ:- ಇದು ಪಾಕ್ಷಿಕವಾಗಿ ಸರಿಯೆನಿಸಿದರೂ ಅಷ್ಟೇ ಅಲ್ಲ. ರಾಜನು ಬಹಿಃಸೇವಕನನ್ನು ನಿಯಂತ್ರಣ ಮಾಡಿ ಕೆಲಸಮಾಡಿಸಿಕೊಂಡರೂ ಈಶ್ವರನಂತೆ ಅಲ್ಲ. ಜೀವನು ಈಶಾಧೀನನೆಂದರೆ ಈಶನು ಅಂತರ್ಯಾಮಿತಯಾ ಜೀವನ ಒಳಗಿದ್ದು ಪ್ರೇರಣೆ ಮಾಡತಕ್ಕವನು. ಜೀವನಿಗೆ ಯಾವಾಗ, ಯಾವಾಗ, ಹೇಗೆ ಹೇಗೆ ಜ್ಞಾನೇಚ್ಛಾ ಪ್ರಯತ್ನಗಳು ಉತ್ಪತ್ತಿಯಾಗುತ್ತೋ ಅದೆಲ್ಲವೂ ಈಶ್ವರನಿಂದ ಪ್ರೇರಿತವಾಗಿಯೇ ಉತ್ಪತ್ತಿಯಾಗುತ್ತೆ. ಕಾರ್ಯಸಾಫಲ್ಯತೆ, ವಿಫಲತೆಗಾದರೋ ಜೀವನ ಯೋಗ್ಯತೆಯೇ ಮೊದಲಾದುವು ಕಾರಣ. ಜೀವಾಚ್ಛಾದಿಕ ಪೊರೆಯಿಂದ ಜೀವನ ಗುಣಗಳು ಜೀವನಿಗೆ ತಿಳಿಯದಲೇ ಇರುವುದರಿಂದಲೂ, ಈಶ್ವರನು ಸರ್ವಜ್ಞಮೂರ್ತಿ ಯಾದ್ದರಿಂದ ಎಲ್ಲವನ್ನೂ ತಿಳಿದವನಾದ್ದರಿಂದಲೂ, ಜೀವನ ಯೋಗ್ಯತೆಯನ್ನನುಸರಿಸಿ ಅಂತರ್ಯಾಮಿಯಾಗಿ ಜ್ಞಾನೇಚ್ಛಾಕ್ರಿಯೆಗಳನ್ನು ಜೀವನಲ್ಲಿ ಉಂಟುಮಾಡುತ್ತಾನೆ. ಆದ್ದರಿಂದ ರಾಜಾಧೀನ ಪುರುಷಕರ್ತೃವಂತೆ ಅಲ್ಲ. ಅದಕ್ಕೂ ಮೀರಿದ್ದು.

8))ಶಂಕೆ:- ಹಾಗಾದರೆ ಜೀವನ ಜ್ಞಾನ, ಇಚ್ಛಾ, ಪ್ರಯತ್ನಗಳೆಲ್ಲಾ ಪರಪ್ರಭಾವಿತವೆಂದು ಹೇಳುತ್ತೀರಿ. ಆದ್ದರಿಂದ ಜೀವನು ಯಾವ ಕರ್ಮವನ್ನೂ ಮಾಡದೇ ತೂಷ್ಣೀಂಭಾವವನ್ನು ಹೊಂದುವುದೇ ಲೇಸು. ತನ್ನ ಪ್ರಯತ್ನಾದಿ ಗಳಲ್ಲಿಯೂ ಜೀವನಿಗೆ ಕರ್ತೃತ್ವವನ್ನು ಅಂಗೀಕಾರಮಾಡುವುದು ಹೇಗೆ?

ಉತ್ತರಃ- ಹೀಗೆ 'ತೂಷ್ಣೀಂಭಾವ' ಹೊಂದುವುದು ಸಾಧ್ಯವೇ ಇಲ್ಲ. ''ನ ಹಿ ಕಶ್ಚಿತ್‌ಕ್ಷಣಮಪಿ ಜಾತುತಿಷ್ಠತ್ಯಕರ್ಮ- ಕೃತ್। ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತ್ಯೈಜೈರ್ಗುಣೈಃ।'' (ಯಾರೂ ಎಂದಿಗೂ ಒಂದುಕ್ಷಣವೂ ಕಾರ್ಯಮಾಡದೇ ಕೂಡುವುದು ಸಾಧ್ಯವೇ ಇಲ್ಲ. ಎಲ್ಲರೂ 'ಅ' ನಾಮಕ ಪರಮಾತ್ಮನಿಂದ ಪ್ರೇರಿತರಾಗಿ ಕಾರ್ಯಮಾಡುತ್ತಲೇ ಇರುತ್ತಾರೆ.) ಹೀಗೆ ಗೀತಾವಾಕ್ಯ. ಪ್ರತಿಯೊಬ್ಬರ ಅನುಭವವೂ ಹಾಗೆಯೇ ಇರುತ್ತೆ. ಈ ಬಗ್ಗೆ ಮಹಾಭಾರತದಲ್ಲಿ ದ್ರೌಪದಿ, ಧರ್ಮರಾಯ ಮತ್ತು ಭೀಮಸೇನರಲ್ಲಿ ನಡೆದ ಸಂವಾದವನ್ನು ಶ್ರೀಮದಾಚಾರ್ಯರು ನಿರ್ಣಯದಲ್ಲಿ ವಿಶದ ಪಡಿಸಿದ್ದಾರೆ. ಧರ್ಮರಾಯನು ಅತಿಮೃದುಸ್ವಭಾವದವನಾದ್ದರಿಂದ ವನವಾಸ, ಅಜ್ಞಾತವಾಸ ಕಳೆದಮೇಲೂ ರಾಜ್ಯ ಹಿಂದಕ್ಕೆ ಪಡೆಯುವ ಬಗ್ಗೆ ಉದಾಸೀನನಾಗಬಹುದೆಂದೂ, ಆದ್ದರಿಂದ ಹದಿನಾಲ್ಕನೇ ವರ್ಷದಲ್ಲಿ ಏನಾದರೂ ರಾಜ್ಯ ಪಡೆಯಲು ರಾಜನಿಂದ ಆಗಲೇ ಪ್ರತಿಜ್ಞೆಮಾಡಿಸುವ ಉದ್ದೇಶ್ಯ ಭೀಮನು ಧರ್ಮರಾಯನ ಬಳಿಗೆ ದ್ರೌಪದಿಯನ್ನು ಕಳುಹಿಸುತ್ತಾನೆ. ದ್ರೌಪದಾದೇವಿಯರು ಎಚ್ಚರಿಸಿದಾಗ ಧರ್ಮರಾಯನು ''ಸರ್ವಜಗತ್ತಿಗೂ ಶ್ರೀಹರಿಯೇ ಕರ್ತಾ. ಅವನಿಂದಲೇ ಜಗತ್ತಿಗೆ ಸುಖದುಃಖಗಳು ಆಗುತ್ತವೆ. ನಾವು ಯಾರಲ್ಲೂ ಕೋಪಮಾಡಿಕೊಳ್ಳದೆ, ಅನ್ಯಾಯವೆಸಗಿದವರಲ್ಲೂ ಕ್ಷಮೆ ತೋರಬೇಕು'' ಎಂದು ಹೇಳುತ್ತಾನೆ.

''ಇತ್ಯುಕ್ತವಂತಂ ನೃಪಮಾಹ ಪಾರ್ಷತೀ ಯದಿಕ್ಷಮಾ ಸರ್ವನರೇಷು ಧರ್ಮಃ।
ರಾಜ್ಞಾ ನ ಕೃತ್ಯಂ ನ ಚ ಲೋಕಯಾತ್ರಾ ಭವೇಜ್ಜಗತ್ ಕಾ ಪುರುಷೈರ್ವಿನಶ್ಯೇತ್॥70/22॥
ಸತ್ಯಂ ಚ ವಿಷ್ಣುಃ ಸಕಲ ಪ್ರವರ್ತಕೋ ರಮಾವಿರಿಂಚೇಶಪುರಃಸರಾಶ್ಚ।
ಕಾಷ್ಠಾದಿವತ್ ತದ್ವಶಗಾಃ ಸಮಸ್ತಾಸ್ತಥಾಪಿ ನ ವ್ಯರ್ಥತಾ ಪೌರುಷಸ್ಯ ॥ 71/22 ॥
ತದಾಜ್ಞಯಾ ಪುರುಷಶ್ಚೇಷ್ಟಮಾನಃ ಚೇಷ್ಟಾನುಸಾರೇಣ ಶುಭಾಶುಭಸ್ಯ।

ಭೋಕ್ತಾ ನ ತಚ್ಚೇಷ್ಟಿತಮನ್ಯಥಾ ಭವೇತ್ ಕರ್ತಾ ತಸ್ಮಾತ್ ಪುರುಷೋऽಪ್ಯಸ್ಯ ವಶ್ಯಃ॥ 72/22॥
ವೃಥಾ ಯದಿ ಸ್ಯಾತ್ ಪೌರುಷಂ ಕಸ್ಯ ಹೇತೋಃ ವಿಧಿನಿಷೇಧಸ್ಯ ಸಮಸ್ತವೇದಗಃ।
ವಿಧೇರ್ನಿಷೇಧಸ್ಯ ಚ ನೈವ ಗೋಚರಃ ಪುಮಾನ್ ಯದಿಸ್ಯಾತ್ ಭವತೋ ಹಿ ತೌ ಹರೇಃ। 73/22॥
ತೇನೈವ ಲೇಪಶ್ಚ ಭವೇದಮುಷ್ಯ ಪುಣ್ಯೇನ ಪಾಪೇನ ನ ಚೈವ ಚಾಸೌ।
ಲಿಪ್ಯೇತ ತಾಭ್ಯಾಂ ಪರಮಃ ಸ್ವತಂತ್ರಃ ಕರ್ತಾ ತತಃ ಪುರುಷೋऽಪ್ಯಸ್ಯ ವಶ್ಯಃ॥ 74/22॥

(ಧರ್ಮರಾಜ ಹೀಗೆ ಹೇಳಿದಾಗ, ದ್ರೌಪದಿಯು ಹೇಳುತ್ತಾರೆ. 'ಎಲ್ಲರಲ್ಲೂ ಕ್ಷಮೆ ತೋರುವುದು ರಾಜನ ಧರ್ಮವಾದರೆ ರಾಜನು ಏಕೆ ಬೇಕು? ಲೋಕಯಾತ್ರೆಯೇ ಇರದೇ ಜಗತ್ತು ದುರ್ಜನರಿಂದ ನಾಶಹೊಂದೀತು. ಶ್ರೀಹರಿಯು ಸಕಲ ಪ್ರವರ್ತಕನೆಂಬುದು, ರಮಾಬ್ರಹ್ಮಾದಿಗಳು ಮರದಬೊಂಬೆಗಳಂತೆ ಇರುವರೆನ್ನುವುದೂ ನಿಜವೇ ಆದರೂ ಪುರುಷಪ್ರಯತ್ನವ್ಯರ್ಥವಾಗದು. ಹರಿಪ್ರೇರಣೆಯಿಂದಲೇ ಕರ್ಮಮಾಡಿದರೂ ಅವನು ಆ ಕರ್ಮಕ್ಕೆ ಕರ್ತನೇ ಹೌದು. ಏಕೆಂದರೆ ಆ ಕರ್ಮದ ಫಲವನ್ನು ಉಣ್ಣುತ್ತಾನೆ. ಶ್ರೀಹರಿಯ ಅಧೀನನಾಗಿ ಕರ್ತನಾಗಿ ಶುಭಾಶುಭಫಲಭೋಕ್ತೃ ಆಗಿದ್ದಾನೆ. ಹಾಗೆ ಪೌರುಷವು ವ್ಯರ್ಥವಾಗುವುದಾದರೆ ಎಲ್ಲಾ ವೇದಗಳಲ್ಲಿರುವ ವಿಧಿನಿಷೇಧಗಳು ಯಾರಿಗಾಗಿ. ವಿಧಿನಿಷೇಧಗಳಿಗೆ ಜೀವನು ಒಳಪಟ್ಟಿಲ್ಲವಾದರೆ, ಶ್ರೀಹರಿಗೆ ವಿಧಿನಿಷೇಧಗಳೆನ್ನಬೇಕು. ಇದರಿಂದಲೇ ಶ್ರೀಹರಿಗೆ ಪುಣ್ಯಪಾಪಗಳ ಲೇಪಗಳಿವೆ ಎಂದು ಹೇಳಬೇಕು. ಆದರೆ ಅವನು ಸ್ವತಂತ್ರನಾದ್ದರಿಂದಲೇ ವಿಧಿನಿಷೇಧಗಳ ಲೇಪವಿಲ್ಲ. ಆದ್ದರಿಂದಲೂ ಜೀವನ ಕರ್ತೃತ್ವವನ್ನು ಒಪ್ಪಲೇಬೇಕು) ಹೀಗೆ ಹೇಳಿದಾಗ ಧರ್ಮರಾಜನು ''ಸ್ತ್ರೀಗೆ ವಾಚಾಳತ್ವವು ಕೂಡದು'' ಎಂದು ನಿಂದಿಸುತ್ತಾನೆ. ಆಗ ಈ ವಾದವನ್ನು ಮುಂದುವರಿಸಿ ಭೀಮಸೇನದೇವರು ಹೇಳುತ್ತಾರೆ.)

ರಾಜನ್ ವಿಷ್ಣುಃ ಸರ್ವಕರ್ತಾ ನ ಚಾನ್ಯಃ ತತ್ತಂತ್ರಮೇವ ಅನ್ಯದಸೌ ಸ್ವತಂತ್ರಃ।
ತಥಾಪಿ ಪುಂಸಾ ವಿಹಿತಂ ಸ್ವಕರ್ಮ ಕಾರ್ಯಂ ತ್ಯಾಜ್ಯಂ ಚಾನ್ಯದತ್ಯಂತಯತ್ನಾತ್॥ 77/22 ॥
ಪ್ರತ್ಯಕ್ಷಮೇತತ್ ಪುರುಷಸ್ಯ ಕರ್ಮ ತೇನಾನುಮೇಯಾ ಪ್ರೇರಣಾ ಕೇಶವಸ್ಯ।
ಸ್ವಕರ್ಮಕೃತ್ವಾ ವಿಹಿತಂ ವಿಷ್ಣುನಾ ತತ್ಪ್ರೇರಣೇತ್ಯೇವ ಬುಧೋऽನು ಮನ್ಯತೇ ॥78/22॥
ತೇನೈತಿ ಸಮ್ಯಗ್ ಗತಿಮಸ್ಯ ವಿಷ್ಣೋರ್ಜನೋऽಶುಭೋ ದೈವಮಿತ್ಯೇವ ಮತ್ವಾ
ಹಿತ್ವಾ ಸ್ವಕಂ ಕರ್ಮಗತಿಂ ಚ ತಾಮಸೀಂ ಪ್ರಯಾತಿ ತಸ್ಮಾತ್ಕಾರ್ಯಮೇವ ಸ್ವಕರ್ಮ॥ 79॥
ಜ್ಞಾತವ್ಯಂ ಚೈವಾಸ್ಯ ವಿಷ್ಣೋರ್ವಶತ್ವಂ ಕರ್ತವ್ಯಂ ಚೈವಾತ್ಮನಃ ಕಾರ್ಯಕರ್ಮ।
ಪ್ರತ್ಯಕ್ಷೈಷಾ ಕರ್ತೃತಾ ಜೀವಸಂಸ್ಥಾ ತಥಾऽऽಗಮಾದನುಮಾನಾಚ್ಚ ಸರ್ವಮ್॥80॥
ವಿಷ್ಣೋರ್ವಶೇ ತನ್ನ ಹೇಯಂ ದ್ವಯಂ ಚ ಜಾನನ್ ವಿದ್ವಾನ್ಕುರುತೇ ಕಾರ್ಯಕರ್ಮ।
ತತ್ಪ್ರೇರಕಂ ವಿಷ್ಣುಮೇವಾಭಿಜಾನನ್ ಭವೇತ್ ಪ್ರಮಾಣತ್ರಿತಯಾನುಗಾಮೀ॥ 81 ॥
ಪೂರ್ಣಪ್ರಮಾಣಂ ತತ್ರಸ್ಥಂ ಚಾವಿರೋಧೇನೈಕತ್ರಸ್ಥಂ ತತ್ರಯಂ ಚಾವಿರೋಧೀ।
ಪೃಥಙ್ ಮಧ್ಯಂ ಚಾಪ್ರಮಾಣಂ ವಿರೋಧೀ ಸ್ಯಾತ್ ತತ್ ತಸ್ಮಾತ್ ತ್ರಯಮೇಕತ್ರ ಕಾರ್ಯಂ॥ 82॥
ಅಜ್ಞಃ ಪ್ರತ್ಯಕ್ಷಂ ತ್ವಪಯಾಯ್ಯೈವ ದೈವಂ ಮತ್ವಾ ಕರ್ತೃ ಸ್ವಾತ್ಮಕರ್ಮ ಪ್ರಜಹ್ಯಾತ್।
ವಿದ್ವಾನ್ ಜೀವಂ ವಿಷ್ಣುವಶೇ ವಿದಿತ್ವಾ ಕರೋತಿ ಕರ್ತವ್ಯಮಜಸ್ರಮೇವ॥83॥
ಸ್ವಭಾವಾಖ್ಯಾ ಯೋಗ್ಯತಾ ಯಾ ಹಠಾಖ್ಯಾ ಯಾऽನಾದಿಸಿದ್ಧಾ ಸರ್ವಜೀವೇಷು ನಿತ್ಯಾ।
ಸಾ ಕಾರಣಂ ಪ್ರಥಮಂ ತು ದ್ವಿತೀಯಮನಾದಿಕರ್ಮೈವ ತಥಾ ತೃತೀಯಃ॥84॥
ಜೀವಪ್ರಯತ್ನಃ ಪೌರುಷಾಖ್ಯಸ್ತದೇತತ್ ತ್ರಯಂ ವಿಷ್ಣೋರ್ವಶಗಂ ಸರ್ವದೈವ।
ಸ ಕಸ್ಯಚಿನ್ನ ವಶೇ ವಾಸುದೇವಃ ಪರಾತ್ಪರಃ ಪರಮೋऽಸೌ ಸ್ವತಂತ್ರಃ॥ 85/22 ॥
ಹಠಶ್ಚಾಸೌ ತಾರತಮ್ಯಸ್ಥಿತೋ ಹಿ ಬ್ರಹ್ಮಾಣಮಾರಭ್ಯ ಕಲಿಶ್ಚ ಯಾವತ್।
ಹಠಾಶ್ಚ ಕರ್ಮಾಣಿ ಭವಂತಿ ಕರ್ಮಜೋ ಯತ್ನೋ ಯತೋ ಹಠಕರ್ಮಪ್ರಯೋಕ್ತಾ॥86॥
ವಿನಾ ಯತ್ನಂ ನ ಹಠೋ ನಾಪಿ ಕರ್ಮ ಫಲಪ್ರದೋ ವಾಸುದೇವೋऽಖಿಲಸ್ಯ।
ಸ್ವಾತಂತ್ರ್ಯಶಕ್ತೇರ್ವಿನಿಯಾಮಕೋ ಹಿ ತಥಾಪ್ಯೇತಾನ್ಸೋऽಪ್ಯಪೇಕ್ಷ್ಯೈವ ಯುಂಜೇತ್॥87॥
ಏತಾನಪೇಕ್ಷ್ಯೈವ ಫಲಂ ದದಾನೀತ್ಯಸ್ಯೈವ ಸಂಕಲ್ಪ ಇತಿ ಸ್ವತಂತ್ರತಾ।
ನಾಸ್ಯಾಪಗಚ್ಛೇತ್ಸ ಹಿ ಸರ್ವಶಕ್ತಿರ್ನಾಶಕ್ತತಾ ಕ್ವಚಿದಸ್ಯ ಪ್ರಭುತ್ವಾತ್॥89/22॥
ತಸ್ಮಾತ್ ಕಾರ್ಯಂ ತೇನ ಕ್ಲೃಪ್ತಃ ಸ್ವಕರ್ಮ ತತ್ಪೂಜಾರ್ಥಂ ತೇನ ತತ್ಪ್ರಾಪ್ತಿರೇವ।
ಅತೋऽನ್ಯಥಾ ನಿರಯಃ ಸರ್ವಥಾ ಸ್ಯಾತ್..........''

''ರಾಜನೇ, ವಿಷ್ಣುವೇ ಸರ್ವಕರ್ತಾ. ಬೇರೆ ಯಾರೂ ಅಲ್ಲ. ಅವನಿಗಿಂತ ಬೇರೆ ಎಲ್ಲವೂ ಅವನ ಅಧೀನ. ಅವನು ಸ್ವತಂತ್ರ. ಹೀಗಿದ್ದರೂ ಜೀವನು ಸ್ವವರ್ಣಾಶ್ರಮೋಚಿತವಾದ ಕರ್ಮವನ್ನು ಮಾಡಲೇ ಬೇಕು. (ತೂಷ್ಣೀಂ ಭಾವವು ಕೂಡದು. ಅತ್ಯಂತ ಪ್ರಯತ್ನದಿಂದ ಸ್ವಕರ್ಮಾಚರಣೆ ಮಾಡಬೇಕು.) ಹಾಗೂ ನಿಷಿದ್ಧಕರ್ಮವನ್ನು ಅತ್ಯಂತ ಪ್ರಯತ್ನದಿಂದ ತ್ಯಜಿಸಲೂ ಬೇಕು.( ಅತ್ಯಂತ ಯತ್ನಾತ್ ಎಂದರೆ ಶೀಲಗೆಟ್ಟ ಹೆಂಗಸು ಬಂದು ನನ್ನಸಂಗ ಮಾಡೆಂದು ಜೋತು ಬಿದ್ದರೆ, ಪುರುಷನು ಕತ್ತುಹಿಡಿದು ನೂಕಿಯಾದರೂ ಅಥವಾ ಚಾಟಿ ಏಟು ಕೊಟ್ಟಾದರೂ ಅವಳಿಂದ ದೂರವಿರಬೇಕು. ಹೀಗೆ ಶ್ರೀವಾದಿರಾಜರ ಅರ್ಥ)॥7॥ ಜೀವನು ಕರ್ಮಮಾಡುವುದು ಪ್ರತ್ಯಕ್ಷ ಕಂಡಿದೆ. (ನಾವೇ ನಿತ್ಯ ಸಂಧ್ಯಾವಂದನಾದಿಗಳನ್ನು ಮಾಡುತ್ತಿರುವುದರಿಂದ) ಈ ನಿತ್ಯಕರ್ಮಮಾಡುತ್ತಿರುವುದು ವಿಷ್ಣುಪ್ರೇರಣೆಯಿಂದಲೇ ಊಹಿಸಬಹುದು.(ಎಲ್ಲರೂ ಚೇತನರೇ ಆದರೂ ಆಸ್ತಿಕರು ಮಾತ್ರ ವಿಹಿತ ಕರ್ಮಮಾಡುವುದು, ಕಾಮುಕರು ಕಾಮ್ಯಕರ್ಮದಲ್ಲಿ ನಿರತರಾಗುವುದು ಏನು ತೋರಿಸುತ್ತದೆಂದರೆ, ಶ್ರೀಹರಿಯ ಪ್ರೇರಣೆಯಿಂದಲೇ ಅವನ ನಿಯಮಾನುಸಾರ ಕರ್ಮನಡೆಯುತ್ತದೆ ಎಂದು ಊಹಿಸಬಹುದು--ವಾ.) ಆದ್ದರಿಂದಲೇ ಜ್ಞಾನಿಯು ವಿಷ್ಣುವಿಧಿಸಿದ ಕರ್ಮವನ್ನು ತಾನು ಮಾಡಿ ಅವನ ಪ್ರೇರಣೆಯಿಂದ

ಮಾಡಿದ್ದೇನೆಂದು ತಿಳಿಯುತ್ತಾನೆ॥78॥ (ಇದರಿಂದ ಜ್ಞಾನಿಯಾದರೂ ಕೆಲವೊಮ್ಮೆ ತನಗೆ ಅನಿಷ್ಟಹೇತುಭೂತ ಕರ್ಮಗಳನ್ನು, ಅವು ಅನಿಷ್ಟವೆಂದು ತಿಳಿದಿದ್ದರೂ ಮಾಡುವುದು ಕಂಡಿದೆ. ಹೀಗೇಕೆ? ತನಗಿಂತ ಬೇರೊಬ್ಬ ಸ್ವತಂತ್ರ ಪುರುಷ ನಮ್ಮಲ್ಲಿದ್ದು ಪ್ರೇರಿಸುತ್ತಾನೆಂಬ ಅರಿವು ಅನುಭವಕ್ಕೆ ಬರುತ್ತದೆ. ಜಡಕರ್ಮವೇ ಚೇತನನನ್ನು ಪ್ರೇರಿಸುತ್ತೆಂದು ಏಕೆ ಹೇಳಬಾರದು. ಸಾಧ್ಯವಿಲ್ಲ. ಜಡ ಕುಠಾರವೇ ತನ್ನಷ್ಟಿಗೇ ಕಡಿಯುವುದಿಲ್ಲ. ದೇವದತ್ತನಿಂದ ಗೃಹೀತವಾಗಿ ಅವನ ಇಚ್ಛಾನುಸಾರ ಕಡಿಯುತ್ತೆ. ದೇವದತ್ತನ ಇಚ್ಛೆಯಿಲ್ಲದಿದ್ದರೆ ಕಡಿಯುವುದಿಲ್ಲ. ಅಷ್ಟೇಕೆ, ಊಟಮಾಡುವವ ತನ್ನ ಜಿಹ್ವೆಯನ್ನೇ ಏಕೆ ಕಚ್ಚುತ್ತಾನೆ. ಇದರಿಂದಲೂ ಭಗವಂತನೇ ನಿಯಮನ ಮಾಡುತ್ತಾನೆಂದು ನಿರ್ಧರಿಸಬಹುದು. ಆದ್ದರಿಂದಲೇ ವೇದಪುರುಷ ''ನಿಷುಸೀದ ಗಣಪತೇ.....'' ಹೇಳಿದ್ದಾನೆ. ಶ್ರೀಭಾಗವತದಲ್ಲಿ ಧ್ರುವರಾಯರು ''ಯೋಽಂತಃ ಪ್ರವಿಶ್ಯಮಮವಾಚಮಿಮಾಂ ಪ್ರಸುಪ್ತಾಂ ಸಂಜೀವಯತ್ಯಖಿಲಶಕ್ತಿಧರಃ ಸ್ವಧಾಮ್ನಾ। ಅನ್ಯಾಂಶ್ಚ ಹಸ್ತಚರಣಶ್ರವಣತ್ವಗಾದೀನ್ ಪ್ರಾಣಾನ್ ನಮೋ ಭಗವತೇ ಪುರುಷಾಯ ತುಭ್ಯಂ।'' ಎಂದು ಸ್ತೋತ್ರ ಮಾಡಿರುತ್ತಾರೆ.) ॥78॥ ಜ್ಞಾನಿಯು ಹರಿಪ್ರೇರಣೆ ಎಂದುಕೊಂಡು ಕರ್ಮಮಾಡುವುದರಿಂದ ಶ್ರೀಹರಿಯ ಅನುಗ್ರಹದಿಂದ ವೈಕುಂಠಾದಿ ಲೋಕವನ್ನು ಹೊಂದುತ್ತಾನೆ. ಇನ್ನು ಅವಿವೇಕಿಗಳು ಎಲ್ಲವೂ ದೈವವೇ ಮಾಡುತ್ತದೆ ಎನ್ನುತ್ತಾ ವಿಹಿತ ಕರ್ಮತ್ಯಾಗಮಾಡಿ ತಾಮಸ ಗತಿಯನ್ನು ಹೊಂದುತ್ತಾರೆ. ಆದ್ದರಿಂದಲೂ ಪ್ರತಿಯೊಬ್ಬನೂ ಸ್ವಕರ್ಮಾಚರಣೆಯನ್ನು ಮಾಡಲೇಬೇಕು॥79॥ ತಾನು ವಿಷ್ಣು ಅಧೀನನಾಗಿ ಕರ್ಮಮಾಡುತ್ತಿದ್ದೇನೆಂದು ತಿಳಿಯಬೇಕು. ಹಾಗೂ ವಿಹಿತಕರ್ಮವನ್ನು ಮಾಡಲೇಬೇಕು. ಜೀವನಲ್ಲಿರುವ ಈ ಕರ್ತೃತ್ವಶಕ್ತಿಯು ಪ್ರತ್ಯಕ್ಷದಿಂದ ಸಿದ್ಧವಾಗಿಯೇ ಇದೆ. ಹೇಗೆಂದರೆ, ''ನಾನು ಈ ಕರ್ಮಮಾಡುತ್ತಿದ್ದೇನೆ' ಎಂದು ಸಾಕ್ಷಿಯಿಂದ ಎಲ್ಲರಿಂದಲೂ ಅನುಭವಿಸಲ್ಪಡುತ್ತದೆ. ಆದ್ದರಿಂದ, ''ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ'' ಇತ್ಯಾದಿ ಆಗಮ ಪ್ರಮಾಣದಿಂದಲೂ ಸಿದ್ಧವಾಗಿದೆ. 'ಜೀವನು ಕರ್ಮಾದಿಗಳ ಕರ್ತಾ ಕರ್ಮಫಲಭೋಕ್ತೃವಾದ್ದರಿಂದ ಜಡದಂತೆ ಅಲ್ಲವಾದ್ದರಿಂದ'' ಎಂದು ಅನುಮಾನಪ್ರಮಾಣದಿಂದಲೂ ಜೀವನ ಕರ್ತೃತ್ವಸಿದ್ಧವಾಗಿದೆ. ''ಓಂಕರ್ತಾ ಶಾಸ್ತ್ರಾರ್ಥವತ್ತ್ವಾತ್ಓಂ'' ಎಂದು ಸೂತ್ರಕರ್ತೃ ಬಾದರಾಯಣರಿಂದ ನಿರ್ಣೀತವಾಗಿದೆ. ಹಾಗೆ ಜೀವನ ಕರ್ತೃತ್ವ, ಭೋಕ್ತೃತ್ವವೂ ಈಶ್ವರಾಧೀನವೆಂದು ಜ್ಞಾನಿಯು ತಿಳಿದು ಕರ್ಮಮಾಡುತ್ತಾನೆ. ಜೀವಗತಕರ್ತೃತ್ವವೂ, ಈಶ್ವರಗತ ಕರ್ತೃತ್ವವೂ ಇವೆರಡನ್ನೂ ತಿಳಿದು ಕರ್ಮಮಾಡುವುದರಿಂದ ಜ್ಞಾನಿಯು ಈ ಮೂರು ಪ್ರಮಾಣಗಳನ್ನೂ ಅನುಸರಿಸಿ ದಂತಾಯಿತು. ಹೀಗೆ ಕರ್ತವ್ಯಕರ್ಮವನ್ನು ಮಾಡಿ, ಈಶ್ವರ ನಿಯಮನವನ್ನು ತಿಳಿಯಬೇಕು. ಅನ್ಯಥಾ ಅಪ್ರಾಮಾಣಿಕನೆನ್ನಿಸುತ್ತಾನೆ.॥80॥81॥ ಹೀಗೆ ಪ್ರತ್ಯಕ್ಷ, ಅನುಮಾನ, ಆಗಮ ಇವು ಮೂರೂ ಒಂದೇ ವಿಷಯದಲ್ಲಿ ಪರಸ್ಪರ ಅವಿರೋಧಿಯಾಗಿ ಕಂಡುಬಂದರೆ ಅದು ಪೂರ್ಣಪ್ರಮಾಣವೆನ್ನಿಸುತ್ತೆ. ಆದ್ದರಿಂದ, ಜೀವನಕರ್ತೃತ್ವವನ್ನು ಪ್ರತ್ಯಕ್ಷಪ್ರಮಾಣದಿಂದಲೂ, ತನ್ನಕರ್ತೃತ್ವಶ್ರೀಹರಿಯ ಅಧೀನದಲ್ಲಿದೆ ಎಂಬುದನ್ನು ಅನುಮಾನಪ್ರಮಾಣ ದಿಂದಲೂ ತಿಳಿದು ತನ್ನದು ಅಸ್ವತಂತ್ರ ಕರ್ತೃತ್ವ ಈಶ್ವರನದು ಸ್ವತಂತ್ರ ಕರ್ತೃತ್ವ ಹೀಗೆ ತಿಳಿದ್ದರಿಂದ ಪೂರ್ಣ ಪ್ರಮಾಣದಿಂದ ತಿಳಿದಂತೆ ಆಯಿತು. ಜ್ಞಾನಿಗಳು ಪೂರ್ಣಪ್ರಮಾಣವನ್ನೇ ಸ್ವೀಕರಿಸುತ್ತಾರೆ.॥82॥ ಅಜ್ಞಾನಿಯು ಪ್ರತ್ಯಕ್ಷಸಿದ್ಧವಾದ ಜೀವಕರ್ತೃತ್ವವನ್ನು ಬಿಟ್ಟು ದೈವವೇ ಕರ್ತೃ ಎಂದು ತಿಳಿದು ಸ್ವಕರ್ಮಭ್ರಷ್ಟನಾಗುತ್ತಾನೆ. ಜ್ಞಾನಿ ಜೀವನು ವಿಷ್ಣುವಿನ ಅಧೀನವೆಂದು ತಿಳಿದು ಕರ್ಮವನ್ನುಮಾಡುತ್ತಾನೆ.॥83॥ ಇನ್ನುಕರ್ಮವು ಕಾರ್ಯಕಾರಿ ಯಾಗಲು ಮೂರು ಕಾರಣವನ್ನು ಹೇಳುತ್ತಾರೆ. ಸರ್ವ ಜೀವರಲ್ಲಿಯೂ ಅನಾದಿನಿತ್ಯವಾದ ಯೋಗ್ಯತೆಯೇ ಮೊದಲನೇ ಕಾರಣ. ಈ ಯೋಗ್ಯತೆಗೇ ಸ್ವಭಾವವೆಂದೂ, ಹಠವೆಂದೂ ಹೆಸರು. ಅನಾದಿ ಕರ್ಮವು ಎರಡನೇ ಕಾರಣ. ಇದಕ್ಕೆ ಪೌರುಷ(ಚೇತನ ಸಂಬಂಧಿ) ಎಂದೂ ಹೆಸರು. ಜೀವ ಪ್ರಯತ್ನವು ಮೂರನೇ ಕಾರಣ. ಇವು ಮೂರು ಸದಾ ಶ್ರೀಹರಿಯ ಅಧೀನ(ಅವನ ನಿಯಂತ್ರಣ) ದಲ್ಲಿರುತ್ತವೆ. ಹೊರತು ಹರಿಮಾತ್ರ, ಯಾರಿಗೂ ಅಧೀನ ನಲ್ಲ. ಏಕೆಂದರೆ ಅವನು ಸ್ವತಂತ್ರ, ಸರ್ವೋತ್ತಮ॥84॥ 85॥ ಜೀವಯೋಗ್ಯತೆಯು (ಹಠವು) ಚತುರ್ಮುಖ ಬ್ರಹ್ಮನಿಂದ ಮೊದಲುಗೊಂಡು ಕಲಿಪರ್ಯಂತವಾಗಿಯೂ, ತಾರತಮ್ಯದಿಂದ ಇರುತ್ತದೆ. (ಪ್ರಧಾನಯೋಗ್ಯತೆಯು ಬ್ರಹ್ಮನಲ್ಲಿ, ನಂತರ ರುದ್ರದೇವರಿಂದ ಮನುಷ್ಯೋತ್ತಮರ ಪರ್ಯಂತ ಕಿಂಚಿತ್ ಕಿಂಚಿತ್ ಯೋಗ್ಯತೆಯು ನ್ಯೂನ ಕ್ರಮವಾಗಿ ಇರುತ್ತೆ. ಈ ಯೋಗ್ಯತೆಯೇ ಇಲ್ಲಿ ಜ್ಞಾನಭಕ್ತ್ಯಾದಿಗುಣಗಳಿಗೆ ಕಾರಣವು ಕಡೆಗೆ ಮುಕ್ತಿಗೂ ಕಾರಣವಾಗತಕ್ಕದ್ದು. ಯೋಗ್ಯತೆ ಅನುಸರಿಸಿಯೇ ಜ್ಞಾನಭಕ್ತ್ಯಾದಿಗಳಲ್ಲೂ ತಾರತಮ್ಯವುಂಟು. ಹಾಗೂ ಮುಕ್ತಿಯಲ್ಲೂ ಆನಂದಾನುಭವದಲ್ಲೂ ತಾರತಮ್ಯಕ್ಕೆ ಕಾರಣವು. ಇದು ಮುಕ್ತಿಯೋಗ್ಯಜೀವರ ಯೋಗ್ಯತೆಯು. ಮಿಶ್ರ ಜೀವ ರಲ್ಲಿ ಮಧ್ಯಮ ಯೋಗ್ಯತಾ. ಅದು ಶ್ರೀಹರಿಯಲ್ಲಿ ಭಕ್ತಿ, ದ್ವೇಷಗಳ ಮಿಶ್ರಣರೂಪದಲ್ಲಿದ್ದು ಕಡೆಗೆ ಸುಖದುಃಖ ಎರಡರ ಅನುಭವಕ್ಕೂ ಕಾರಣವಾಗುತ್ತೆ. ಮಧ್ಯಮಜೀವರಲ್ಲೂ ಯೋಗ್ಯತೆಯು ತಾರತಮ್ಯಸ್ಥಿತಿಯಲ್ಲಿಯೇ ಇರುತ್ತೆ. ಇದು ಮುಕ್ತಿಗೂ, ಅಂಧಃತಮಸ್ಸಿಗೂ ಕಾರಣವಾಗದೇ ನಿತ್ಯಸಂಸಾರಕ್ಕೆ ಕಾರಣವಾದ್ದರಿಂದ ಮಧ್ಯಮ ಯೋಗ್ಯತೆಯು. ಅಂಧಃತಮಸ್ಸಿಗೆ ಕಾರಣವಾಗತಕ್ಕ ಯೋಗ್ಯತೆಗೆ ಅಧಮಯೋಗ್ಯತೆ ಎಂದು. ಅದು ತಮೋಜೀವರಲ್ಲಿ ಇರುತ್ತೆ. ಅದು ವಿಷ್ಣುವೈಷ್ಣವ ದ್ವೇಷ, ಮಿಥ್ಯಾಜ್ಞಾನಕ್ಕೆ ಕಾರಣವಾಗಿ; ಅದೂ ಸಹ ತಮೋಜೀವಿಗಳಲ್ಲಿ ತಾರತಮ್ಯರೂಪದಲ್ಲಿ ಇದ್ದು; ಕಲಿಯಲ್ಲಿ ಎಲ್ಲಾ ತಮೋಜೀವಿಗಳಿಗಿಂತಲೂ ಅಧಿಕಮಟ್ಟದಲ್ಲಿ ಇರುವುದರಿಂದ ಕಲಿಯು ಅಧಮಾಧಮನೆನ್ನಿಸುತ್ತಾನೆ. ಈ ಅಧಮ ಯೋಗ್ಯತೆಯು ಅಂಧಃತಮಸ್ಸಿನಲ್ಲಿ ಅನುಭವಿಸುವ ದುಃಖಕ್ಕೆ ಕಾರಣವಾಗಿ ತಾರತಮ್ಯರೂಪದಲ್ಲಿಯೇ ಇರುತ್ತೆ. ಈ ಮೂರು ವಿಧದ ಯೋಗ್ಯತೆಗೆ ಅನುಸಾರವಾಗಿ ಪೂರ್ವಕರ್ಮವು ಇರುತ್ತೆ. ಈ ಪೂರ್ವಕರ್ಮಗಳಿಂದ ಈಗಿನ ಪ್ರಯತ್ನಗಳೂ ತಾರತಮ್ಯದಿಂದ ಉಂಟಾಗುತ್ತದೆ. ಪುರುಷಪ್ರಯತ್ನವು ಯೋಗ್ಯತೆಗೂ, ಪೂರ್ವಕರ್ಮಕ್ಕೂ ಪ್ರಯೋಜಕವಾಗಿದೆ. (ಅಂದರೆ, ಪುರುಷಪ್ರಯತ್ನವು ಯೋಗ್ಯತಾ, ಪೂರ್ವಕರ್ಮ ಇವುಗಳ ಫಲವನ್ನು ಅಭಿವ್ಯಕ್ತೀಕರಿಸಿ ಆ ಫಲವನ್ನು ಜೀವನಿಗೆ ಅನುಭವಕ್ಕೆ ತಂದುಕೊಡುತ್ತೆ.)॥86॥ ಆದ್ದರಿಂದ ಪುರುಷಪ್ರಯತ್ನವಿಲ್ಲದೇ ಯೋಗ್ಯತೆಯು ಫಲವನ್ನು ಕೊಡುವುದಿಲ್ಲ. ಪೂರ್ವಕರ್ಮವೂ ಫಲವನ್ನು ಕೊಡುವುದಿಲ್ಲ. ಈ ಮೂರಕ್ಕೂ ಅನುಗುಣವಾಗಿ ಫಲಕೊಡುವವನು ಶ್ರೀಹರಿ (ಅಂದರೆ ಯತ್ನ, ಯೋಗ್ಯತೆ, ಕರ್ಮ ಈ ಮೂರರಲ್ಲೂ ವಾಸುದೇವನು ಇದ್ದು ಆಯಾಯ ಜೀವಸಮುದಾಯದ ಹಠ, ಕರ್ಮ, ಪ್ರಯತ್ನಾನುಸಾರೇಣ ಫಲವನ್ನು ಕೊಡುವವನಾದ್ದರಿಂದ ''ಫಲಪ್ರದೋ ವಾಸುದೇವೋಽಖಿಲಸ್ಯ'' ಎಂದಿದ್ದಾರೆ. ಶ್ರೀಹರಿಯು ಸ್ವತಂತ್ರನಾದ್ದರಿಂದಲೇ ಈ ಮೂರಕ್ಕೂ ನಿಯಾಮಕನಾಗಿ ಯೋಗ್ಯನ್ಯಾಯಾಧೀಶನಂತೆ ಈ ಮೂರರ ಅನುಗುಣವಾಗಿ (ಜ್ಞಟ್ಟಜ್ಞಿಟ್ಟೀಳಜಿಠಢ ಡಿಜಿಠಜ ಠಜ್ಞಭಿಠಭಿ ಠಜ್ಞಟಭಿಭಿ ಟ್ಟೀಳಟಟ್ಟಞ್ಞಿಠಿಠ) ಯೇ ಫಲವನ್ನು ಕೊಡುತ್ತಾನೆ. ಆದ್ದರಿಂದ ಶ್ರೀಹರಿಯಲ್ಲಿ ವೈಷಮ್ಯ ನೈರ್ಘೃಣ್ಯಾದಿ ದೋಷಗಳು ಇಲ್ಲ.)॥88॥ ''ಯೋಗ್ಯತಾ, ಕರ್ಮ, ಪ್ರಯತ್ನಗಳನ್ನು ಅನುಸರಿಸಿಯೇ ಫಲವನ್ನು ಕೊಡುತ್ತೇನೆ''. ಈ ಶ್ರೀಹರಿಯ ಸಂಕಲ್ಪಕ್ಕೇ ಸ್ವತಂತ್ರತೆಯೆಂದು ಹೆಸರು. ಈ ತಾನೇ ಹಾಕಿಕೊಂಡಿರುವ ಸಂಕಲ್ಪಕ್ಕೆ ವಿರುದ್ಧವಾಗಿ ನಡೆಯುವುದಿಲ್ಲ. ಯಾರೂ ಅವನ ಸಂಕಲ್ಪವನ್ನು ಬದಲಾಯಿಸಲು ಸಮರ್ಥರಲ್ಲ. ಅವನು ಸರ್ವಶಕ್ತ ಮತ್ತು ಅತ್ಯಂತ ಸಮರ್ಥ. 'ಪರಾಸ್ಯ ಶಕ್ತಿಃ ವಿವಿಧೈವ ಶ್ರೂಯತೇ' ಇತ್ಯಾದಿ ಶ್ರುತಿಗಳು ಪ್ರಸಿದ್ಧವಾಗಿವೆ॥89। ಹೀಗೆ ಜೀವನಿಗೆ ಕರ್ತೃತ್ವವಿರುವುದರಿಂದಲೇ ಶ್ರೀಹರಿಯು ವಿಧಿಸಿರುವ ಸ್ವಯೋಗ್ಯಕರ್ಮವನ್ನು ಅವನ ಪೂಜೆಯೆಂದು ತಿಳಿದು ಮಾಡಿ ಸ್ವಯೋಗ್ಯಗತಿಯನ್ನು ಹೊಂದಬೇಕು. ಅನ್ಯಥಾ ನರಕಾದ್ಯನರ್ಥಕ್ಕೆ ಭಾಗಿಯಾಗ ಬೇಕಾದೀತು॥90॥ ಆದ್ದರಿಂದಲೇ, ''ಶ್ರುತಿಸ್ಮೃತಿ

ಮಮೈವಾಜ್ಞೇ ಯಸ್ತೇ ಉಲ್ಲಂಘ್ಯ ವರ್ತತೇ। ಆಜ್ಞಾಚ್ಛೇದೀ ಮಮ ದ್ವೇಷೀ ಮದ್ಭಕ್ತೋऽಪಿ ನ ವೈಷ್ಣವಃ'' ಎಂದು ಭಾರತದ ವಚನವಿದೆ. ದೈವವೇ ಕರ್ತೃವು ನನಗೆ ಕರ್ತೃತ್ವವಿಲ್ಲವೆಂದು ತಿಳಿಯುವವನು ತಮೋಯೋಗ್ಯನೆಂದು ನಿಂದಿತನಾಗಿದ್ದಾನೆ. ವಿಷ್ಣುಭಕ್ತರು ತನ್ನ ಅಧೀನ ಕರ್ತೃತ್ವವನ್ನು ತಿಳಿದು ವೇದವಿಹಿತವಾದ ಕರ್ಮದಲ್ಲಿ ನಿಷ್ಠನಾಗಿ ಹರಿಪೂಜಾತ್ವೇನ ಕರ್ತವ್ಯಕರ್ಮವಮಾಡಿ ಯೋಗ್ಯಗತಿಯನ್ನು ಹೊಂದುವುದೇ ಧರ್ಮ. ಇದನ್ನೇ ಭೀಮಸೇನದೇವರು ಪ್ರತಿಪಾದನೆ ಮಾಡಿರುತ್ತಾರೆ.

9))ಶಂಕೆ:- ಜೀವನು ಪರತಂತ್ರ ಕರ್ತನೆಂದು ಒಪ್ಪಿದ್ದೇವೆ. ಅಷ್ಟಕ್ಕೇ ಅವನು ವಿಧಿನಿಷೇಧಗಳಿಗೆ ಬದ್ಧನು ಹೇಗೆ?

ಉತ್ತರ:-ಹಿಂದೆಯೇ ಹೇಳಿದಂತೆ ಜೀವನು ಚೇತನನು. ಅವನಿಗೆ ಸ್ವರೂಪದಲ್ಲಿಯೇ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಹೊಂದಿರುವವನು. ಜಡವಾದ ಮರದ ಗೊಂಬೆಯಂತೆ ಜಡಪದಾರ್ಥಕ್ಕಿಂತ ಅತ್ಯಂತ ವಿಲಕ್ಷಣ ನಾದವನು.''ಕರ್ತಾ ವಿಜ್ಞಾನಾತ್ಮಾ ಪುರುಷಃ ಯತ್ಕರ್ಮ ಕುರುತೇ ತದಭಿಸಂಪದ್ಯತೇ'' ಎಂದು ಉಪನಿಷತ್ ವಾಕ್ಯ. ಇಂಥಾ ಚೇತನರೂಪಿ ಜೀವನು 'ಇದುಮಾಡು' 'ಇದು ಬಿಡು' ಎಂಬ ಶಾಸ್ತ್ರಾದೇಶಕ್ಕೆ ಬದ್ಧನೇ ಆಗುತ್ತಾನೆ. ''ವಿಜ್ಞಾನಾತ್ಮಾ'' ಎಂದಿದ್ದರಿಂದ ಮದ್ಯದ ಅಮಲಿಗೆ ಒಳಗಾಗಿ ಪರವಶನಂತೆ ಅಲ್ಲ, ಶ್ರೀಹರಿಯು ಅಂತರ್ಯಾಮಿ ರೂಪದಿಂದ ಇದ್ದು ಅವನ ಶಕ್ತಿತ್ರಯಗಳನ್ನು ಉದ್ಬೋದನೆ ಮಾಡಿ ವಿವೇಕವನ್ನು ತಂದುಕೊಟ್ಟು ಅವನಿಂದ ಕಾರ್ಯಮಾಡಿಸಿ ತಾನೇ ಈ ಕಾರ್ಯಕರ್ತಾ ಎಂಬ ಬುದ್ಧಿಯನ್ನು ಹುಟ್ಟಿಸಿ ಫಲವನ್ನು ಕೊಡುತ್ತಾನೆ.

10))ಶಂಕೆ:-ಪರಮಾತ್ಮನು ಅಂತರ್ಯಾಮಿತನದಿಂದ ಇದ್ದು ಕರ್ಮವನ್ನು ತಾನೂ ಮಾಡಿ ಮಾಡಿಸುತ್ತಾನೆ ಎಂದು ಹೇಳಿದಂತಾಯಿತು. ಅಂದರೆ ಒಂದೇ ಕ್ರಿಯೆಗೆ ಜೀವನೂ ಕರ್ತಾ, ಈಶ್ವರನೂ ಕರ್ತಾ ಆಯಿತು. ಹೀಗೆ ಕರ್ತರು ಇಬ್ಬರು ಇರುವಾಗ ವಿಧಿನಿಷೇಧಗಳಿಗೆ ಜೀವನಿಗೇ ಏಕೆ ಅನ್ವಯಿಸಬೇಕು. ಪರಮಾತ್ಮನಿಗೂ ವಿಧಿನಿಷೇಧತ್ವವು ಬರಲಿ?

ಉತ್ತರ:- ಈ ಆಕ್ಷೇಪಕ್ಕೆ ಉತ್ತರ ಕೊಡಲಾಗಿದೆ. ಈಶ್ವರನು ಸ್ವತಂತ್ರನು. ಅಂದರೆ ತನ್ನ ಇರುವಿಕೆಗೆ, ತನ್ನ ಜ್ಞಾನಕ್ಕೆ, ತನ್ನ ಪ್ರವೃತ್ತಿಗೆ ಮತ್ತೊಬ್ಬರ ಅಧೀನವಾಗಿಲ್ಲದೇ ಇರುವುದು. ಇದು ಅವನ ಸ್ವತಂತ್ರತೆ. ಅವನು ವಿಧಿನಿಷೇಧಗಳ ಕಟ್ಟುಪಾಡಿಗೆ ಒಳಗಾಗುವುದೆಂದರೆ, ತನ್ನ ಸ್ವತಂತ್ರತೆಯನ್ನು ಕಳೆದುಕೊಂಡಂತೆ ಅನೀಶ್ವರನಾಗುತ್ತಾನೆ. ಆದ್ದರಿಂದ ಜೀವನ ಜೊತೆಯಲ್ಲಿಯೇ ಇದ್ದು ಜೀವನ ಕರ್ಮಗಳನ್ನು ನಡೆಸಿಕೊಡುವವನಾದರೂ ಅದರ ಫಲರೂಪವಾದ ಸುಖದುಃಖಗಳನ್ನು ಹೊಂದುವುದಿಲ್ಲ. ಪರಮಾತ್ಮನ ಸಾಹಚರ್ಯವಿರುವುದರಿಂದಲೇ ಜೀವನು ತನ್ನ ಸಹಜ ಶಕ್ತಿಯಿಂದ ಕೆಲಸ ಮಾಡಲು ಸಾಧ್ಯ. ಇಲ್ಲದಿದ್ದರೆ ಇಲ್ಲ. ''ಯದನುಗ್ರಹತಃ ಸಂತಿ, ನ ಸಂತಿ ಯದುಪೇಕ್ಷಯಾ'' ಎಂದು ಶಾಸ್ತ್ರದ ನುಡಿ.

11))ಶಂಕೆ:- ಪಿಶಾಚಾವಿಷ್ಟ ಪುರುಷನು ಪ್ರಜ್ಞೆಯಿಲ್ಲದೇ ಮನಬಂದಂತೆ ಕಾರ್ಯಪ್ರವೃತ್ತನಾಗುತ್ತಾನೆ. ಅಂಥವನು ವಿಧಿನಿಷೇಧಗಳಿಗೆ ಹೇಗೆ ವಿಷಯನಾಗುತ್ತಾನೆ? ಹಾಗೆಯೇ ಪಿಶಾಚಿಯಂತೆಯೇ ದೇವರು ಜೀವರುಗಳಲ್ಲಿದ್ದು ಪ್ರೇರಿಸುವನಾದ್ದರಿಂದ ಜೀವನಿಗೆ ವಿಧಿನಿಷೇಧಗಳ ಬದ್ಧತೆ ಹೇಗೆ? ಅವನನ್ನು ವಿಧಿನಿಷೇಧಗಳ ಬಂಧನಕ್ಕೆ ಒಳಪಡಿಸಲು ಸಾಧ್ಯವಿಲ್ಲವಷ್ಟೆ?

ಉತ್ತರ:-ದೇವರು ಪಿಶಾಚಿಯಂತೆ ಪ್ರೇರಿಸತಕ್ಕವನಲ್ಲ. ಅವನು ಸರ್ವಜ್ಞಮೂರ್ತಿ. ಜೀವನಲ್ಲಿದ್ದು ಪ್ರೇರಿಸುವ ರೀತಿಯೆಂತೆಂದರೆ, ಜೀವನ ಯೋಗ್ಯತೆ, ಕರ್ಮ, ಅವುಗಳನ್ನು ಅನುಸರಿಸಿಯೇ ಜೀವನಲ್ಲಿ ಇಚ್ಛೆಯನ್ನು ಹುಟ್ಟಿಸಿ, ಜೀವನಿಂದಲೇ ಇಚ್ಛಾನುಸಾರ ಪ್ರಯತ್ನಮಾಡಿಸಿ ಫಲಾದಿಗಳನ್ನು ಕೊಡುತ್ತಾನೆ. ಪಿಶಾಚಿಯಂತೆ ಯದ್ವಾತದ್ವಾ ಅಲ್ಲ. ಯೋಗ್ಯಕ್ರಮವನ್ನನ್ನುಸರಿಸಯೇ ಕಾರ್ಯ ನಡೆಯುತ್ತೆ. ಶ್ರೀಹರಿ ನಿತ್ಯತೃಪ್ತನಾದ ಪರಮಚೇತನ. ತನಗೆ ಯಾವದನ್ನೂ ಬಯಸದೇ ಜೀವರ ಮೇಲೆ ಕಾರುಣ್ಯದಿಂದ ಅವರವರ ಯೋಗ್ಯತೆಯನ್ನನುಸರಿಸಿ ಫಲದಾತೃ ವಾಗಿದ್ದಾನೆ. ಪರಮಾತ್ಮನದು ಅಂಕೆಯಿಲ್ಲದ ನಡವಳಿಕೆಯಲ್ಲ. ಲೋಕದಲ್ಲಿ ತಂದೆ, ಗುರು, ಅಥವಾ ಬೇರೆ ಹಿರಿಯರು ಉಪನಯನವಾದ ಮೇಲೆ ಬ್ರಹ್ಮಚಾರಿಯನ್ನು 'ಮಗೂ, ನೀನು ಪ್ರತಿದಿನ ಸಂಧ್ಯಾವಂದನಾದಿಗಳನ್ನು ಮಾಡು. ವೇದಾಧ್ಯಯನ ಮಾಡು' ಇತ್ಯಾದಿ ರೀತಿಯಾಗಿ ಬುದ್ಧಿ ಹೇಳಿ ಅವನಲ್ಲಿ ಇಚ್ಛಾಹುಟ್ಟಿಸಿ ಕಾರ್ಯ ಪ್ರವೃತ್ತಿ ಉಂಟು ಮಾಡುತ್ತಿರುವುದನ್ನು ಕಂಡಿದ್ದೇವೆ. ದೇವರೂ ಸಹ ತನ್ನ ಆಜ್ಞಾರೂಪವಾದ ಶೃತಿಸ್ಮೃತಿಗಳ ದ್ವಾರಾ ಜೀವರುಗಳನ್ನು ಬೋಧಿಸಿ, ಅಂತರ್ಯಾಮಿಯಾಗಿ ಜೀವರುಗಳ ಒಳಗೂ ಇದ್ದು ಇಚ್ಛೆ ಹುಟ್ಟಿಸಿ, ಕಾರ್ಯಪ್ರವೃತ ರನ್ನಾಗಿ ಮಾಡುತ್ತಾನೆ.

12))ಶಂಕೆ:- ಜೀವನ ಕರ್ತೃತ್ವಶಕ್ತಿಯು ಈಶ್ವರಾಧೀನವಾಗಿದ್ದರಿಂದಲೇ ಅವನು ವಿಧಿನಿಷೇಧಬದ್ಧನಲ್ಲವೆನ್ನುತ್ತೇವೆ ಎಂದರೆ;

ಉತ್ತರ:- ಇದು ಸರಿಯಲ್ಲ. ಈಶ್ವರನು ಕರ್ತೃತ್ವಶಕ್ತಿಯನ್ನು ಉತ್ತೇಜಿಸದಿದ್ದರೆ ಜೀವನು ಸುಮ್ಮನಿರುತ್ತಾನೆ. ವಿದ್ಯುತ್ ಶಕ್ತಿ ಪ್ರವಹಿಸಿದಾಗ ಮಾತ್ರ ವಿದ್ಯುತ್ ದೀಪವು ತನ್ನ ಕ್ಯಾಂಡಲ್ ಪವರ್ ಅನುಸರಿಸಿ ಬೆಳಕನ್ನು ಕೊಡುತ್ತದೆ. ಹಾಗೆಯೇ ಈಶ್ವರಾಧೀನ ಕರ್ತೃತ್ವಶಕ್ತಿಯಿಂದಲೇ ಜೀವನು ತನ್ನ ಕರ್ತೃತ್ವಶಕ್ತಿಯನ್ನು ಪ್ರಕಾಶಪಡಿಸುತ್ತಾನೆ. ವಿಧಿನಿಷೇಧಗಳಿಗೆ ವಿಷಯನಾಗುವುದು ಈಶ್ವರಾಧೀನತ್ವ ಕಾರಣದಿಂದಲೇ. ಈಶ್ವರಾಧೀನತ್ವವೇ ಪ್ರಯೋಜಕವು. ಅಂದರೆ ಅಸ್ವತಂತ್ರತೆಯೇ ವಿಧಿನಿಷೇಧಬದ್ಧತೆಗೆ ಕಾರಣ. ಸ್ವತಂತ್ರ ಪುರುಷನು (ಈಶ್ವರನು) ವಿಧಿನಿಷೇಧ ಬಂಧನಕ್ಕೆ ಒಳಪಡುವವನಲ್ಲ. ಹಾಗೆಯೇ ಜಡವಸ್ತುಗಳಿಗೆ ಜ್ಞಾನ,ಇಚ್ಛಾ,ಕ್ರಿಯಾಶಕ್ತಿ ಯಿಲ್ಲವಾದ್ದರಿಂದ ಮತ್ತೂ ಮುಕ್ತ ಚೇತನರಿಗೂ ವಿಧಿನಿಷೇಧಬದ್ಧತೆ ಇಲ್ಲ. ಏಕೆಂದರೆ ಈ ಮೂವರಿಗೂ ವಿಧಿನಿಷೇಧಗಳಿಂದ ಆಗಬೇಕಾಗಿರುವ ಪ್ರಯೋಜನವಿಲ್ಲ. ಇದು ಕೇವಲ ಸಂಸಾರಿ ಜೀವರಿಗೆ ವಿಷಯಭೂತವಾದುದು. ವಿಧಿನಿಷೇಧಗಳು ನನಗೇ ಸಂಬಂಧಿಸಿದುದು ಎಂದು ಸಂಸಾರಿ ಜೀವನು ತಿಳಿಯುತ್ತಾನೆ. ಈ ಜ್ಞಾನದಿಂದ ವಿಧಿಯ ಅನುಷ್ಠಾನ ಮಾಡಿದ್ದರಿಂದ ಉಂಟಾಗುವ ಫಲದಲ್ಲಿಯೂ, ಫಲವು ಸಿಗಲು ಬೇಕಾದ ಸಾಧನದಲ್ಲಿಯೂ ಇಚ್ಛೆಯುಂಟಾಗಿ ಕೃತಿಯು ಉಂಟಾಗುತ್ತೆ. ಹೀಗೆ ಎಲ್ಲರಿಗೂ ನಿತ್ಯ ಅನುಭವಸಿದ್ಧವಾಗಿದೆ. ಇಷ್ಟೆಲ್ಲವೂ ಈಶ್ವರ ಅಧೀನವಾಗಿ ನಡೆಯುತ್ತಿದೆ ಎಂಬ ವಿಚಾರದಲ್ಲಿ ಅಜ್ಞಾನಿ ಜೀವನು ಮುಗ್ಧನಾಗಿರುತ್ತಾನೆ. ಆದರೆ ಜ್ಞಾನಿಗಳು ಯೋಗಿ ಪ್ರತ್ಯಕ್ಷದಿಂದ ತಿಳಿಯುತ್ತಾರೆ. ಅವರು ಈಶ್ವರನು ಯಾವ ಒಂದು ಉಪಾಧಿಯನ್ನು ನಿಮಿತ್ತವಾಗಿಟ್ಟುಕೊಂಡು, ನಿರಂಕುಶವಾಗಿ ನಿರ್ನಿಮಿತ್ತವಾಗಿ ಜೀವರಿಗೆ ಸುಖದುಃಖಾದಿಗಳನ್ನು ಉಂಟುಮಾಡುತ್ತಾನೆಂದು ತಿಳಿಯದೆ, ಆದ್ದರಿಂದಲೇ ಸ್ವಾಮಿಗೆ ವೈಷಮ್ಯ- ನೈರ್ಘೃಣ್ಯ ಮೊದಲಾದ ದೋಷಗಳು ಇಲ್ಲವೆಂದು ತಿಳಿಯುತ್ತಾರೆ. ಸ್ವಾಮಿಗೆ ಫಲಲೇಪವಿಲ್ಲದ್ದರಿಂದ ಉದಾಸೀನ ನಂತಿದ್ದರೂ ಉದಾಸೀನನಾಗಿರದೆ ಸ್ವತಂತ್ರ ಕ್ರಿಯಾಶೀಲನಾಗಿ ಎಲ್ಲದರಲ್ಲೂ ಇದ್ದು ಒಳಗೂ ಹೊರಗೂ ಪ್ರೇರಣೆ ಮಾಡಿ ಜಗನ್ನಾಟಕ ಸೂತ್ರಧಾರನಂತೆ ಕೆಲಸ ಮಾಡುತ್ತಾನೆ. ಆದ್ದರಿಂದಲೇ ಶಾಸ್ತ್ರಗಳು ಅವನೇ ಸ್ವತಂತ್ರಕರ್ತನೆಂದೂ ಜೀವರುಗಳು ದಾರುಬೊಂಬೆಯಂತೆ ಅಧೀನರೆಂದೂ ಹೇಳುತ್ತವೆ. ವಸ್ತುತಃ ಜೀವರುಗಳು ದಾರುಬೊಂಬೆಗಳಿಗಿಂತ ಅತ್ಯಂತ ವಿಲಕ್ಷಣ ಚೇತನರು. ಕ್ರಿಯೆಯಲ್ಲಿ ಸ್ವಾತಂತ್ರವಿಲ್ಲದಿದ್ದರೂ ತಿಳಿದು, ಇಚ್ಛಿಸಿ ಪ್ರಯತ್ನಿಸಿ ಸ್ವತಂತ್ರತೆಯಿದ್ದರೆ ಹೇಗೋ ಹಾಗೆ ಕಾರ್ಯಪ್ರವೃತ್ತಿ ಹೊಂದುತ್ತಿರುವುದು ನಿತ್ಯ ಸತ್ಯವಾಗಿದೆ. ಆದ್ದರಿಂದ ನನಗೆ ಕರ್ತೃತ್ವವೇ ಇಲ್ಲ. ಎಲ್ಲಾ ಈಶ್ವರನದು ಎಂದು ಕ್ರಿಯಾಶೂನ್ಯತೆ ತಿಳಿಯುವುದು ಆಸುರೀ ಪ್ರವೃತ್ತಿಯೇ ಸರಿ. ಇದು ತಾಮಸ ಜೀವನ ಲಕ್ಷಣ. ಮುಕ್ತಿಯೋಗ್ಯನು ಹಾಗೆ ತಿಳಿಯಬಾರದು. ಆದ್ದರಿಂದಲೇ 18ನೇ ಅಧ್ಯಾಯ ಗೀತಾಭಾಷ್ಯದಲ್ಲಿ ಶ್ರೀಮದಾಚಾರ್ಯರು ''ಅಪರಾಧೀನ ಕರ್ತೃತ್ವಾಭಾವೇऽಪಿ ಜೀವಸ್ಯ ವಿಧಿದ್ವಾರಾ ಈಶ್ವರಪ್ರಸಾದಾತ್ ಇಚ್ಛೋತ್ಪತ್ತ್ಯಾ ಉಕ್ತಕಾರಣೈಃ

ಅಧಿಷ್ಠಾನಾದಿಭಿಃ ಕರ್ಮದ್ವಾರಾ ಪುರುಷಾರ್ಥೋ ಭವತೀತಿ ನ ಪ್ರವೃತ್ತಿ ವಿಧಿವೈಯರ್ಥ್ಯಮಿತಿ'' ಎಂದಿದ್ದಾರೆ. (ಜೀವನಿಗೆ ಸ್ವತಂತ್ರಕರ್ತೃತ್ವವಿಲ್ಲವೆಂದು ನಿಜವಾದರೂ ಜೀವನಿಗೆ ಶಾಸ್ತ್ರದಲ್ಲಿ ಹೇಳಿರುವ ಕರ್ತವ್ಯಗಳ ಜ್ಞಾನವಾದಾಗ ಈಶ್ವರನ ಅನುಗ್ರಹದಿಂದ ಇಚ್ಛೆಯು ಉತ್ಪನ್ನವಾಗುತ್ತದೆ. ಆಗ ಬೇರೆ ಬೇರೆ ವಿಧವಾದ ಅಧಿಷ್ಠಾನಾದಿ ಕಾರಣಗಳ ಮೂಲಕ ಕರ್ಮವನ್ನು ಮಾಡುತ್ತಾನೆ. ಅದರಿಂದ ಮೋಕ್ಷಾದಿ ಪುರುಷಾರ್ಥವು ಉಂಟಾಗುತ್ತೆ. ಆದ್ದರಿಂದ ಪ್ರವೃತ್ತಿ ವಿಧಿನಿಷೇಧಗಳು ವ್ಯರ್ಥವಲ್ಲ.)

ಮೇಲೆ ನಿರೂಪಿತ ಕಾರಣಗಳಿಂದ ಜೀವನಿಗೆ ''ಕ್ರಿಯಾಸ್ವಾತಂತ್ರರೂಪಂ ಕರ್ತೃತ್ವಂ'' ಕ್ರಿಯೆಯಲ್ಲಿ ಸ್ವಾತಂತ್ರವೆಂಬ ಕರ್ತೃತ್ವವನ್ನು ಹೇಳುವುದು ತಪ್ಪಲ್ಲ. ಅದರಂತೆ ಪಾಣಿನಿಯ 'ಸ್ವತಂತ್ರಃ ಕರ್ತಾ' ಎಂಬುದಕ್ಕೆ 'ಕ್ರಿಯಾಯಾಂ ಸ್ವಾತಂತ್ರ್ಯೇಣ ವಿವಕ್ಷಿತೋऽರ್ಥಃ ಕರ್ತಾಸ್ಯಾತ್' ''ಒಂದು ಕ್ರಿಯೆಯಲ್ಲಿ ಸ್ವತಂತ್ರತೆಯಿಂದ ಕೂಡಿದ್ದು ಎಂದು ಹೇಳಲು ಇಷ್ಟವಾಗಿರುವ ವಸ್ತುವು ಕರ್ತಾ'' ಎಂದು ಅರ್ಥೈಸಿದರೆ ಬಾಧಕವಿಲ್ಲ. ''ಜೀವನು ಮಾಡುವಂತೆ ತೋರುವ ಕ್ರಿಯೆಯಲ್ಲಿ ಜೀವನಿಗೆ ಸ್ವಾತಂತ್ರ್ಯವನ್ನು ಹೇಳಬೇಕೆಂದು ತೋರಿದಾಗ ಜೀವನಿಗೆ ಕರ್ತೃತ್ವವನ್ನು ಹೇಳುವುದು'' ಎಂದು ಅರ್ಥೈಸಬೇಕು. ಅದನ್ನೇ ಶ್ರೀಜಯತೀರ್ಥರು ''ಕ್ರಿಯಾಜ್ಞಾನೇ ಪ್ರತಿ ಕಾರಕಾಂತರಾ ಪ್ರಯೋಜ್ಯತ್ವಲಕ್ಷಣಂ ಸ್ವಾತಂತ್ರ್ಯಂ ಈಶ್ವರಾಯತ್ತಂ ಸ್ವತೋ ವಿದ್ಯತ ಏವ ಜೀವಸ್ಯ'' ಎಂದು ಹೇಳಿದ್ದಾರೆ. ಕ್ರಿಯೆ ಮತ್ತು ಜ್ಞಾನಗಳನ್ನು ಕುರಿತು ಜೀವನು ಕರ್ತಾ ಆಗಿದ್ದಾನೆ. ಆ ಕರ್ತೃತ್ವವು ಕಾರಕಾಂತರದಿಂದ ಅಪ್ರೇರಿತತ್ವ ರೂಪವಾದುದು. ಆದರೆ ಆ ಕರ್ತೃತ್ವವು ಈಶ್ವರಾಯತ್ತವಾದುದು. (ಹೇಗೆ ತಂದೆಯು ದೂರದಲ್ಲಿರುವ ವಿದ್ಯಾರ್ಥಿ ಮಗನಿಗೆ ದ್ರವ್ಯವನ್ನು ಕೊಟ್ಟು ಅದನ್ನು ಖರ್ಚುಮಾಡಲು ಸ್ವತಂತ್ರತೆಯನ್ನು ಕೊಟ್ಟಿದ್ದರೂ ಅದರ ನಿಯಂತ್ರಣ ತಂದೆ ಹೇಗೆ ಇಟ್ಟುಕೊಂಡಿರುತ್ತಾನೋ ಹಾಗೆ). ಪರಮಾತ್ಮನ ಅಧೀನವಾಗಿ ಈ ಸ್ವಾತಂತ್ರ್ಯವು ಜಡಕ್ಕಿಂತ ಹಾಗೂ ತನಗಿಂತ ಕೆಳಗಿನ ಜೀವರಿಗಿಂತ ಹೆಚ್ಚಿನ ಮಟ್ಟದ ಸ್ವಾತಂತ್ರ್ಯವು ಜೀವನಲ್ಲಿದೆ. 'ಸ್ವಾತಂತ್ರ್ಯಂ ಚ ಜಡಾನ್ ಪ್ರತಿ ಪ್ರಭುರ್ಹಿ ಜೀವೋ ಜಡಮಪೇಕ್ಷ್ಯ।' ಎಂದು ಗೀತಾಭಾಷ್ಯ. 'ತದಧೀನಂ ಸ್ವತಂತ್ರ್ಯಂ ಸ್ವಾವರಾಪೇಕ್ಷ್ಯಯೈವ ತು' ಎಂದು ಗೀತಾ ತಾತ್ಪರ್ಯದಲ್ಲೂ; ''ಜಡಂ ಹಿ ಪರಕೃತೇನ ನೋದನಾದಿನಾ ಕ್ರಿಯಾವದ್ ಭವತಿ। ನ ತು ಆಗಂತುಕ ಕಾರಣಮಂತರೇಣ ಸ್ವೇಚ್ಛಯಾ। ಜೀವಸ್ತು ಅನಾದಿಸಿದ್ಧಯಾ ಸ್ವರೂಪಸತ್ತಾ ತುಲ್ಯಯಾ ಪರಮೇಶ್ವರಪ್ರಸಾ-ದಾಯತ್ತಯಾ ಕ್ರಿಯಾಶಕ್ತ್ಯಾ ಕರ್ತಾ ಉಚ್ಯತೇ ಇತಿ ಯುಕ್ತಃ ತತ್ರ ಕರ್ಮವಿಧಿರಿತಿ'' ಗೀತಾಭಾಷ್ಯ ಪ್ರಮೇಯದೀಪಿಕೆ ಯಲ್ಲಿ; ''ನ ಹಿ ಸಾಮರ್ಥ್ಯಪರಪರ್ಯಾಯಂ ಪ್ರಯತ್ನಾದಿ ರೂಪಂ ಕರ್ತೃತ್ವಂ ಜೀವ ಸ್ವರೂಪಾದ್ಭಿನ್ನಂ'' -ಸುಧಾ. ( ಜೀವನ ಕರ್ತೃತ್ವಸಾಮರ್ಥ್ಯವು ಅನಾದಿ ಸಿದ್ಧವಾದದ್ದು , ಸ್ವರೂಪದಿಂದ ಬೇರೆಯಲ್ಲ.) ಅಂಥ ಸ್ವರೂಪಸಿದ್ಧವಾದ ಕರ್ತೃತ್ವವು 'ನಿತ್ಯಂ ನಿತ್ಯಾತ್ಮನಾ ಯತಃ' ಎಂಬ ನ್ಯಾಯದಿಂದ ಪರಮಾತ್ಮನು ಜೀವನ ಕರ್ತೃತ್ವದ ಅನಾದಿತ್ವವನ್ನು ಹಾಗೆಯೇ ರಕ್ಷಣೆ ಮಾಡುತ್ತಾನೆ. ಅದು ಯಾವ ಕಾಲಕ್ಕೂ ನಷ್ಟವಾಗದು. ಇದರ ಮೇಲೆ ಮತ್ತೊಂದು ಆಕ್ಷೇಪ ಏನೆಂದರೆ:-

14))ಶಂಕೆ:- ''ನನಗೆ ಘಟದ ಅವಶ್ಯಕತೆ ಇದೆ. ಅದರ ತಯಾರಿಯೂ ತಿಳಿದಿದೆ. ಈಗ ಘಟ ಮಾಡಬೇಕು. ಅದಕ್ಕಾಗಿ ಪ್ರಯತ್ನಿಸುತ್ತೇನೆ'' ಎಂದು ಕುಲಾಲ(ಕುಂಬಾರ)ನಿಗೆ ಜ್ಞಾನ, ಇಚ್ಛಾ, ಕ್ರಿಯೆಗಳು ತನ್ನ ಸ್ವಂತಿಕೆಯೇ. ಆದ್ದರಿಂದ ಕುಲಾಲನಿಗೇ ಮುಖ್ಯಕರ್ತೃ ಎಂದು ಹೇಳಿ ಈಶ್ವರನಿಗೆ ಕುಲಾಲನ ಕರ್ತೃತ್ವಕ್ಕೆ ಪ್ರಯೋಜಕನು, ಪ್ರೇರಕನು ಎಂದಷ್ಟೇ ಹೇಳಿ ಅದರಿಂದ ಈಶ್ವರನೇ ಎಲ್ಲಾ ಕಾರ್ಯಗಳಿಗೂ ಸ್ವತಂತ್ರಮುಖ್ಯಕರ್ತನೆಂದು ಹೇಳುವುದು ಹೇಗೆ ಸಮಂಜಸ?

ಉತ್ತರ:- ಇದು ಸರಿಯಲ್ಲ. ಶರೀರದಲ್ಲಿ ಜೀವ,ಈಶ್ವರ ಇಬ್ಬರೂ ಇರುತ್ತಾರೆ. ಇವರಿಬ್ಬರದೂ ಅವಿನಾಭಾವ- ಸಂಬಂಧ. ಈ ಇಬ್ಬರಲ್ಲಿ ಈಶ್ವರನು ಪರಮಚೇತನ; ಜೀವನಸಂಬಂಧಿ ಭೂತ, ಭವಿಷ್ಯತ್ ವರ್ತಮಾನ ವಿಚಾರವನ್ನೆಲ್ಲಾ ಪೂರ್ತಿ ತಿಳಿದಿರುವ ಸರ್ವಜ್ಞಮೂರ್ತಿ. ಅವನು ಜೀವನ ಅಂತಃಕರಣವನ್ನು ಸ್ಪಷ್ಟವಾಗಿ ನೋಡಿ, ಆ ಜೀವನ ಯೋಗ್ಯತೆಯನ್ನು ತಿಳಿದು ಅಂತಃ ಕರಣದಲ್ಲಿ ಜ್ಞಾನ, ಇಚ್ಛಾ ಪ್ರಯತ್ನಗಳನ್ನು ಹುಟ್ಟಿಸುತ್ತಾನೆ. (ಅಂತರ್ಯಾಮಿತನದಿಂದ) ಅಷ್ಟೆ ಅಲ್ಲ. ಬಾಹ್ಯರೂಪದಲ್ಲೂ ತಾನೇ ಇದ್ದು ಆಯಾ ಕಾರ್ಯಗಳಿಗೆ ಬೇಕಾಗಿರುವ ಬಾಹ್ಯ ಕಾರಣಗಳಲ್ಲೂ ಪ್ರವೇಶಿಸಿ (ಮಣ್ಣು, ನೀರು, ಚಕ್ರ, ಸಹಾಯಕರಲ್ಲಿ) ಅವನ್ನೂ ಪ್ರೇರೇಪಿಸಿ ಕುಲಾಲನ ಗಡಿಗೆ ಮಾಡುವ ಕಾರ್ಯ ಸಾಫಲ್ಯವಾಗುವಂತೆ ಮಾಡುತ್ತಾನೆ. ಕಡೆಗೆ 'ಗಡಿಗೆ ಕರ್ತಾ ಕುಲಾಲನೇ' ಎಂದು ಲೋಕದಲ್ಲಿ ಖ್ಯಾತಿಯನ್ನು ತಂದು ಕೊಡುತ್ತಾನೆ. ಗೀತಾ ಹತ್ತನೇ ಅಧ್ಯಾಯದಲ್ಲಿ ಪರಮಾತ್ಮನ ಕಾರ್ಯ ಹೀಗೆ ವರ್ಣಿಸಿದೆ:

''ಬುದ್ಧಿರ್ಜ್ಞಾನಮಸಂಮೋಹಃ ಕ್ಷಮಾ ಸತ್ಯಂ ದಮಃ ಶಮಃ। ಸುಖಂ ದುಃಖಂ ಭವೋ ಭಾವೋ ಭಯಂ ಚ ಅಭಯಮೇವಚ॥ ಅಹಿಂಸಾ ಸಮತಾ ತುಷ್ಟಿ ತಪೋ ದಾನಂ ಯಶೋऽಯಶಃ। ಭವಂತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ॥''

ಇದರಿಂದ ಒಂದು ಕ್ರಿಯೆಯಲ್ಲಿ ಪರಮಾತ್ಮನ ಪಾತ್ರವು ಯಾವ ಮಟ್ಟದ್ದು ಎಂದು ತಿಳಿಯುತ್ತೆ. ಆದ್ದರಿಂದಲೇ ಅವನೇ ಎಲ್ಲಾ ಕಾರ್ಯದಲ್ಲೂ ಪರಮ ಮುಖ್ಯಸ್ವತಂತ್ರಕರ್ತಾ. ಇದು ಪರಮಾತ್ಮನು ಜೀವರುಗಳ ಮೇಲೆ ಇಟ್ಟಿರುವ ಪರಮಕಾರುಣ್ಯ. ''ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ'' ಎಂದು ಜ್ಞಾನಿಗಳು ಹೇಳಿದ್ದಾರೆ. ಶ್ರೀವ್ಯಾಸತೀರ್ಥರು ಶ್ರೀಚಂದ್ರಿಕೆಯಲ್ಲಿ;

''ಕರ್ತೃತ್ವಮಾತ್ರಂ ಜೀವಸ್ಯ ಮಮಾಪೀಷ್ಟಂ ಘಟಾದಿಷು ಅನನ್ಯಾಧೀನ ಕರ್ತೃತ್ವೇ, ಸ್ಯಾದ್ಧಿತಾಕರಣಾದಿಕಂ।
ಕಥಂ ನ ಕುರ್ಯಾತ್ ಪ್ರೇಕ್ಷಾವಾನ್ ಸ್ವತಂತ್ರಃ ಸ್ವಹಿತಂ ಸದಾ। ಕಥಂ ಚ ಸ್ವಾಹಿತಂ ಕುರ್ಯಾತ್ತಥಾ ಚ ಸಕಲೋ ಜನಃ॥ ಪೂರ್ಣಾನಂದಶ್ಚ ನಿರ್ದುಃಖಃ ಸರ್ವದೈವ ಪ್ರಸಜ್ಯತೇ। ಕರ್ಮಕಾಲಾದಿಕಸ್ಯಾಪಿ
ಜಡತ್ವಾನ್ನ ಸ್ವತಂತ್ರತಾ॥ ನೈವ ಬಧ್ನಾತಿ ಪುರುಷಂ ಸ್ವಯಂ ಹಿ ನಿಗಡಾದಿಕಂ। ದೇಹಾದಿಯಂತುಶ್ಚ ಹರೇರಗೃಹೀತ್ವಾ ಸ್ವತೋಭಿದಾಂ। ಸ್ವತಂತ್ರಕರ್ತೃತಾಂ ಸ್ವಸ್ಯ ಮನ್ಯತೇ ಹ್ಯಬುಧೋ ಜನಃ॥''

ಘಟಾದಿ ಕಾರ್ಯಗಳನ್ನು ಮಾಡುವಾಗ ಜೀವನಿಗೆ ಕರ್ತೃತ್ವ ಇದೆಯೆಂಬುದನ್ನು ಒಪ್ಪುತ್ತೇವೆ. ಆದರೆ ಆ ಕರ್ತೃತ್ವ ಇನ್ನೊಬ್ಬರ ಅಧೀನವಲ್ಲದ ಮುಖ್ಯಕರ್ತೃತ್ವವಲ್ಲ. ಹಾಗೆ ಜೀವನಿಗೆ ಪರಾಧೀನವಲ್ಲದ ಮುಖ್ಯಕರ್ತೃತ್ವವೇ ಇದ್ದುದೇ ಆದರೆ ತನ್ನ ಹಿತವನ್ನು ತಾನೇ ಮಾಡಿಕೊಳ್ಳದೇ ಇರುವುದು, ತನ್ನ ಅಹಿತವನ್ನು ತಾನೇ ಮಾಡಿಕೊಳ್ಳುವುದು ಹೇಗೆ ಸಾಧ್ಯ. ಲೋಕದಲ್ಲಿ ಎಲ್ಲಾ ಜೀವರಿಗೂ ಇದು ಅನುಭವವೇ ಆಗಿದೆ. ಅವನು ಸ್ವತಂತ್ರಕರ್ತೃವೇ ಆಗಿದ್ದರೆ ತನ್ನ ಹಿತವನ್ನು ತಾನೇ ಮಾಡಿಕೊಂಡು ಯಾವಾಗಲೂ ಪೂರ್ಣನಂದನೂ ನಿರ್ದುಃಖನೂ ಆಗಬೇಕಾಗಿತ್ತು. (ಹಾಗೆ ಕಂಡಿಲ್ಲ.) ಕಾಲಕರ್ಮಾದಿಗಳೇ ತಮ್ಮ ಸ್ವಭಾವದಿಂದಲೇ ಜೀವರಿಗೆ ಸುಖದುಃಖವನ್ನು ಕೊಡುತ್ತವೆಂದರೆ ಅವು ಜಡವಾದ್ದರಿಂದ ಕರ್ತೃತ್ವವೇ ಇಲ್ಲ. ಬೇಡಿ, ಸಂಕೋಲೆಗಳು ತಮ್ಮಷ್ಟಕ್ಕೆ ತಾವೇ ಕಳ್ಳನನ್ನು ಬಂಧಿಸಲಾರವಷ್ಟೆ. ಎಲ್ಲಾ ಜೀವರ ದೇಹೇಂದ್ರಿಯಾದಿಗಳಲ್ಲಿ ನಿಯಾಮಕನಾಗಿ ಹರಿಯು ತನಗಿಂತ ಭಿನ್ನನಾಗಿದ್ದಾನೆಂದು ತಿಳಿಯದೇ ಅಜ್ಞಾನಿ ಜೀವನು ತನಗೆ ಸ್ವತಂತ್ರಕರ್ತೃತ್ವವಿದೆಯೆಂದು ತಿಳಿಯುತ್ತಾನೆ.)

ದ್ವಾದಶಸ್ತೋತ್ರದಲ್ಲಿ ಶ್ರೀಮದಾಚಾರ್ಯರು: ನ ಚ ಕರ್ಮವಿಮಾಮಲಕಾಲಗುಣಪ್ರಭುತೀಶಮಚಿತ್ತನುತದ್ಧಿಯತಃ ಚಿದಚಿತ್ತನು ಸರ್ವಂ ಯಮಯೇದಿತಿ

ವೈದಿಕಮಸ್ತಿ ವಚಃ॥''
''ಯಸ್ಮಾತ್ ಸ್ವತಂತ್ರಕರ್ತೃತ್ವಂ ವಿಷ್ಣೋರೇವ ನ ಚಾನ್ಯಗಂ। ತದಧೀನಂ ಸ್ವತಂತ್ರತ್ವಂ ಸ್ವಾವರಾಪೇಕ್ಷಯೈವ ತು॥
ಜೀವಸ್ಯ ವಿಕೃತಿರ್ನಾಮ ಕರ್ತೃತ್ವಂ ಜಡಸಂಶ್ರಯಂ ಪುಮಾನ್ ದೋಗ್ಧಾಚ ಗೌರ್ದೋಗ್ಧೀ ಸ್ತನೋ ದೋಗ್ಧೇತಿ ಚ ಕ್ರಮಾತ್'' ಇತಿ ಬ್ರಹ್ಮತರ್ಕವಚನಾತ್ ಈಶ್ವರಜೀವಪ್ರಕೃತ್ಯಾದೀನಾಂ ಕರ್ತೃತ್ವಂ ಚ ಅಕರ್ತೃತ್ವಂ ಚ ವಿಭಾಗೇನ ಜ್ಞಾತವ್ಯಮಿತ್ಯುಕ್ತಂ॥ ---ಗೀತಾತಾತ್ಪರ್ಯೇ॥ ತ ' ತ ಿ ್ಯ ವ '
ನ್ಯಾಯದೀಪಿಕಾಯಾಂ-
''ಯತ್ರ ಈಶ್ವರಸ್ಯ ಕರ್ತೃತ್ವಮುಚ್ಯತೇ ತತ್ರ ಸ್ವತಂತ್ರತ್ವಂ। ಯತ್ರ ಜೀವಸ್ಯ ಅಕರ್ತೃತ್ವಮುಚ್ಯತೇ ತತ್ರ ಸರ್ವಥಾ ಕರ್ತೃತ್ವರಾಹಿತ್ಯಂ ಕಿಂ ತ್ವಸ್ವತಂತ್ರಂ ಕರ್ತೃತ್ವಮಿತಿ ವಿಭಾಗೇನ ಜ್ಞಾತವ್ಯಂ।'' ''ಸ್ವಾತಂತ್ರ್ಯಾಭಾವಾಪೇಕ್ಷಯೈವ ಜೀವಸ್ಯ ಕರ್ತೃತ್ವಂ। ಸ್ವವಂದನಂ ಯಥಾ ಪಿತ್ರಾ ಕಾರಿತಂ ಶಿಶುಕರ್ತೃಕಂ। ಏವಂ ಪೂಜಾ ವಿಷ್ಣುಧಿಯೇನಾ ಭವೇತ್ ಜೀವಕೃತೇತ್ಯಪಿ।''
ಜೀವನು ತಾನು ಮಾಡಿದ ಕರ್ಮಕ್ಕೆ ಫಲಸಂಬಂಧ ಹೊಂದಿರುವುದೇ ಅವನು ಕರ್ತನು ಎಂಬುದಕ್ಕೆ ಗಮಕವಾಗಿದೆ. 'ಅಸ್ವತಂತ್ರೇ ಕರ್ತೃಶಬ್ದ ಪ್ರಯೋಗಸ್ಯ ಫಲಸಂಬಂಧಸ್ಯ ದರ್ಶನಾತ್' ಎಂದು ಗೀತಾತಾತ್ಪರ್ಯದಲ್ಲಿ.
15))ಶಂಕೆ:- ಹಾಗಾದರೆ ಗೀತಾ 5.14ರಲ್ಲಿ'' ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ। ನ ಕರ್ಮಫಲ ಸಂಯೋಗಂ ಸ್ವಭಾವಸ್ತು ಪ್ರವರ್ತತೇ॥' ಎಂದು ಕರ್ತೃತ್ವಾದಿಗಳನ್ನು ಪರಮಾತ್ಮನು ಜೀವರಿಗೆ ಕೊಡುವುದಿಲ್ಲ ಎಂದು ಹೇಳುತ್ತದಲ್ಲ. ಅದರ ಅಭಿಪ್ರಾಯವೇನು?
ಉತ್ತರ:- ಈಶ್ವರನು ಜೀವರಿಗೆ ಕರ್ತೃತ್ವಾದಿಗಳನ್ನು ಕೊಟ್ಟರೂ ಸ್ವಾತಂತ್ರ್ಯವನ್ನು ಕೊಡದಿರುವುದರಿಂದ, ಈಶ್ವರನು ಜೀವನಿಗೆ ಕರ್ತೃತ್ವಾದಿಗಳನ್ನು ಕೊಡುವುದಿಲ್ಲ ಎಂಬ ಮಾತಿನ ಅಭಿಪ್ರಾಯ ಹೀಗಿದೆ. ತಂದೆ ತನ್ನ ಮಕ್ಕಳಿಗೆ ಮನೆಯ ಅಧಿಪತ್ಯ ಕೊಡದೇ ಇದ್ದರೂ ಮಕ್ಕಳು ತಂದೆಯ ಆದೇಶದಂತೆ ಅವರವರ ಕಾರ್ಯವನ್ನು ನಿರ್ವಹಿಸಿ ತಂದೆಯ ಸಂಪತ್ತನ್ನು ಅನುಭವಿಸುತ್ತಿದ್ದರೂ 'ಮನೆಯ ಆಡಳಿತ ತಂದೆಯದೇ ಮಕ್ಕಳಿಗೇನೂ ಸ್ವಾತಂತ್ರ್ಯವಿಲ್ಲ' ಎಂಬ ವ್ಯವಹಾರ ಲೋಕದಲ್ಲಿ ಕಂಡಿದೆ. ಅದರಂತೆ ಜೀವರು ಕರ್ಮವನ್ನು ಮಾಡಿ ಕರ್ಮಫಲಸಂಬಂಧ ಹೊಂದಿದ್ದರೂ ಸ್ವಾತಂತ್ರ್ಯ ಇಲ್ಲದ್ದರಿಂದ ಜೀವರಿಗೆ ಕರ್ತೃತ್ವವಿಲ್ಲ ಎಂಬ ಶಾಸ್ತ್ರವ್ಯವಹಾರವಿದೆ.

''ತತ್ ಸ್ವಾತಂತ್ರ್ಯಂ ಕದಾಪ್ಯೇಷಃ ನಾನ್ಯಸ್ಯ ಸೃಜತಿ ಕ್ವಚಿತ್। ಸ್ವಾತಂತ್ರ್ಯಾದೇವ ಪಾಪಾದಿ ಸಂಬಂಧಃ ಕುರ್ವತೋಽಪಿ ನ॥ ಅಜ್ಞಾನಾವೃತ ಬುದ್ಧಿತ್ವಾತ್ ಈದೃಶಂ ತಂ ನ ಜಾನತೇ॥''
ಸ್ವತಂತ್ರ ಇಚ್ಛಾಸ್ವರೂಪನಾದ ಪರಮಾತ್ಮನು ಎಂದೂ ಕೂಡ, ಯಾವ ವಿಷಯದಲ್ಲೂ ಕೂಡ ಜೀವನಿಗೆ (ತನಗೊಬ್ಬನಿಗೆ ಇರತಕ್ಕ ,ತನ್ನದೇ ಆದ) ಕ್ರಿಯಾಸ್ವಾತಂತ್ರ್ಯವನ್ನು ಉಂಟುಮಾಡುವುದಿಲ್ಲ. ಪರಮಾತ್ಮನು ಸ್ವಾತಂತ್ರ್ಯದಿಂದ ಸಮಸ್ತ ಕಾರ್ಯವನ್ನು ಮಾಡುತ್ತಿರುವುದರಿಂದಲೇ, ತನ್ನ ಸ್ವಾತಂತ್ರ್ಯಶಕ್ತಿಯಿಂದಲೇ ಪಾಪ ಪುಣ್ಯಾದಿಗಳ ಸಂಬಂಧವು ಅವನಿಗೆ ಉಂಟಾಗುವುದಿಲ್ಲ. (ಜೀವನಿಗಾದರೋ) ಅಜ್ಞಾನದಿಂದ ಆಚ್ಛಾದಿತವಾದ ಅಂತಃಕರಣ ಉಳ್ಳವರಾದ್ದರಿಂದ (ಸ್ವರೂಪಜ್ಞಾನವು ವ್ಯಕ್ತವಾಗಿಲ್ಲದ್ದರಿಂದ) ಪರಮಾತ್ಮನ ಸ್ವಾತಂತ್ರ ಶಕ್ತಿಯನ್ನು ತಿಳಿಯಲಾರರು.
''ಇದಂ ಚ ಫಲೇಚ್ಛಾಪೂರ್ವಕಕರ್ಮಜನ್ಯಫಲಸಂಬಂಧರೂಪಂ ಜೀವಸ್ಯ ವಿಧಿವಿಷಯತ್ವೇ ಕಾರಣಂ, ನ ಈಶ್ವರ ಮುಕ್ತಜಡೇಷು ವಿಧಿ ಅವಿಷಯೇಷು ಅಸ್ತಿ। ಕಿಂತು ಸಂಸಾರಿ ಚೇತನೇಷ್ವೇವ ಇತಿ ಭವತಿ ಪ್ರಯೋಜಕಮ್।'
(ಫಲವನ್ನು ಅಪೇಕ್ಷಿಸುವುದು, ಅನಂತರ ಕರ್ಮವನ್ನು ಮಾಡುವುದು, ಅನಂತರ ಫಲವನ್ನು ಹೊಂದುವುದು ಎಂಬ) ಫಲಸಂಬಂಧರೂಪಕರ್ತೃತ್ವವು ಜೀವನ ಸಂಧ್ಯಾವಂದನಾದಿ ವಿಧಿವಿಷಯಗಳಲ್ಲಿ ಪ್ರವರ್ತಿಸುವುದಕ್ಕೆ ಕಾರಣವಾಗಿದೆ. ಈ ಫಲ ಸಂಬಂಧರೂಪಕರ್ತೃತ್ವವು ವಿಧಿಗೆ ಅವಿಷಯನಾದ ಈಶ್ವರನಲ್ಲಿ ಇಲ್ಲ. ಮುಕ್ತ ಜೀವನಲ್ಲೂ ಇಲ್ಲ. ಕೇವಲ ಸಂಸಾರಿ ಜೀವನಲ್ಲಿ ಮಾತ್ರ ಇದೆ. ಅದು ಸಂಸಾರಿ ಜೀವರ ಪ್ರವೃತ್ತಿಗೆ ಕಾರಣವಾಗಿದೆ.
16))ಶಂಕೆ:- ಜೀವನನ್ನು ವಿಧಿವಿಷಯನನ್ನಾಗಿ ಏಕೆ ಮಾಡಿದ?
ಉತ್ತರ:- ಇದು ಜೀವರ ಸ್ವರೂಪಸಂಬಂಧಪಟ್ಟ ವಿಷಯ. ಜೀವರು ಅನಂತ ಸಂಖ್ಯಾಕರು. ಅವರಲ್ಲಿ ಮುಕ್ತಿ ಯೋಗ್ಯ ಜೀವರು ಜ್ಞಾನಾನಂದಾದಿ ಗುಣಸ್ವರೂಪರು. ತಾರತಮ್ಯೋಪೇತರು. ಆದರೆ ಅವರ ಸ್ವರೂಪಗುಣವು ಪ್ರಕಾಶಕ್ಕೆ ಬಾರದೇ ಇರುವ ರೀತಿಯಲ್ಲಿ ಆವರಕಗಳಿವೆ. ಮೊದಲನೇ ಆವರಣ ಪ್ರಕೃತಿ ತ್ರಿಗುಣಾತ್ಮಕಳು ಮಾಯಾ ರೂಪದಿಂದ ಪರಮಾತ್ಮನ ಆಜ್ಞಾನುಸಾರ ಬಂಧಕಳಾಗಿದ್ದಾಳೆ. ಈ ಬಂಧಕ ಪ್ರಕೃತಿಯು ಎರಡು ರೀತಿಯದಾಗಿದೆ. ಒಂದು ಜೀವಾಚ್ಛಾದಿಕ. ಜೀವನಲ್ಲಿರುವ ಸ್ವರೂಪಭೂತವಾದ ಜ್ಞಾನಾನಂದಾದಿಗುಣಗಳ ಅನುಭವಕ್ಕೆ ಬಾರದ ರೀತಿಯಲ್ಲಿ ಬಂಧಕವಾಗಿದೆ. ಮತ್ತೊಂದು ಪರಮಾಚ್ಛಾದಿಕ. ಇದು ಪರಮಾತ್ಮನ ಅಪರೋಕ್ಷಕ್ಕೆ ಪ್ರತಿಬಂಧಕ ವಾಗಿದೆ. ಈ ಎರಡು ಬಂಧಕ ಪ್ರಕೃತಿಗಳನ್ನು ನಿಮಿತ್ತ ಮಾಡಿಕೊಂಡು ಗುಣಕ್ರಿಯಾತ್ಮಕಳಾದ ಶ್ರೀಭೂದುರ್ಗಾ ನಾಮಕಳಾದ ಮಹಾಲಕ್ಷ್ಮಿಯು ಜೀವರನ್ನು ಸಂಸಾರಸ್ಥರನ್ನಾಗಿ ಮಾಡುತ್ತಾಳೆ. ಮೂರನೆಯದು ಜೀವನ ಅನಾದಿ ಕರ್ಮ. ಲಕ್ಷ್ಮೀದೇವಿಯು ಈ ಕರ್ಮಪರಂಪರೆಯನ್ನು ನಿಮಿತ್ತಮಾಡಿಕೊಂಡು ಜೀವನನ್ನು ಸಂಸಾರಸ್ಥರನ್ನಾಗಿ ಮಾಡುತ್ತಾಳೆ. ನಾಲ್ಕನೆಯದು ಷೋಡಶಕಲಾತ್ಮಕವಾದ ಲಿಂಗದೇಹವು. ಇದೂ ಬಂಧಕ ಆವರಣವು. 'ಲಿಂಗಂ ಜ್ಞಾಪಕಂ' ಎನ್ನುವಂತೆ ಜೀವನ ಸ್ವರೂಪದೇಹವನ್ನು ಜ್ಞಾಪಿಸುವಂತೆ (ವೇಸ್ಟ್‌ಕೋಟ್ ಇದ್ದಹಾಗೆ) ಅದೂ ಆವರಕ. ಇದೂ ಸಂಸಾರಕ್ಕೆ ಕಾರಣವಾಗಿದೆ. ಐದನೆಯದು, ಅನಾದಿಯಾದ ಭಾವರೂಪ ಅಜ್ಞಾನ 'ನಾನು ಅಜ್ಞನು' ಎಂಬ ಅನುಭವವನ್ನು ಜೀವರಿಗೆ ತಂದುಕೊಟ್ಟು ಜೀವರ ಭಿನ್ನಭಿನ್ನ ಯೋಗ್ಯತೆಗಳನ್ನನುಸರಿಸಿ ಚಿತ್ರವಿಚಿತ್ರ ಜ್ಞಾನ ಇಚ್ಛಾ ಪ್ರಯತ್ನವನ್ನುಂಟು ಮಾಡುತ್ತಾಳೆ ಮಾಯಾರೂಪ ಲಕ್ಷ್ಮೀದೇವಿಯು. ಆರನೆಯದು, ಅನಾದಿರೂಪ ಕಾಮ. ಏಳನೇ ಆವರಣ ಪರಮಾತ್ಮನ ಇಚ್ಛಾರೂಪವಾದುದು. ಹೀಗೆ ಬಂಧಕ ಶಕ್ತಿಗಳಿಂದ ಜೀವನ ಸ್ವರೂಪದ ಜ್ಞಾನಾನಂದಾದಿ ಗುಣಗಳ ಪ್ರಕಾಶಕ್ಕೆ ಬರದೇ ಇರುತ್ತದೆ. ಇಂಥ ಜೀವರುಗಳನ್ನು ನೋಡಿ ''ಸದಮಂದ್ರಸಾಂದ್ರ ಸ್ವಾನಂದ-ತುಷ್ಟವಪುಷೋಪಿ'' ತಾನು ನಿರ್ದೋಷವೂ ಪೂರ್ಣವೂ. ವ್ಯಾಪ್ತವೂ. ಸ್ವರೂಪಭೂತವೂ ಆದ ಆನಂದದಿಂದ ಸಂತೃಪ್ತವಾದ ದೇಹವುಳ್ಳವನಾದರೂ ಶ್ರೀಹರಿಯು 'ಭೂತ್ಯೈ ನಿಜಾಶ್ರಿತಜನಸ್ಯ' ತನ್ನನ್ನು ಆಶ್ರಯ ಮಾಡಿಕೊಂಡಿರುವ ಸುಜೀವಿಗಳ ಕಲ್ಯಾಣಕ್ಕೋಸ್ಕರ, ಅವರನ್ನು ಉದ್ಧಾರಮಾಡಬೇಕೆಂಬ ಇಚ್ಛೆಯಿಂದ ಸ್ವಾಮಿಯು ಅವರನ್ನು ಸೃಷ್ಟಿಗೆ ತಂದು ಸಾಧನಾದಿ ಮಾಡಿಕೊಂಡು ಉದ್ಧಾರವಾಗಲಿ ಎಂದು ಸಾಧನ ಉಪಯೋಗಕ್ಕೆ ಬೇಕಾದ ಕರಚರಣಾದಿಗಳಿಂದ ಇರುವ ಬಾಹ್ಯಶರೀರ, ಬೇಕಾದ ಸಾಧನಸಾಮಗ್ರಿಗಳನ್ನು ಸೃಷ್ಟಿಮಾಡಿಕೊಟ್ಟು, ಹಾಗೂ ಜೀವರ ಜ್ಞಾನೇಚ್ಛಾಪ್ರವೃತ್ತಿಗಳನ್ನು ಪ್ರೇರೇಪಿಸುವ ಅದನ್ನು ನಿಯಮನ ಮಾಡುವ ಪ್ರಾಣಾದಿ ತತ್ವಾಭಿಮಾನಿ ದೇವತೆಗಳ ಹಿಂಡನ್ನು ಸೃಷ್ಟಿಮಾಡಿ, ಅವರನ್ನು ಜೀವಶರೀರದಲ್ಲಿರುವ ತತ್ವಗಳಲ್ಲಿ ನಿಯಾಮಕರನ್ನಾಗಿ ಮಾಡಿ, ಜೀವನ ಯೋಗ್ಯತೆಯನ್ನು ಅನುಸರಿಸಿ ಅಂದರೆ ಯೋಗ್ಯತಾ ಅತಿಕ್ರಮಣ ಆಗದಂತೆ ತಾನೂ ನೋಡಿಕೊಂಡು; ಮಾಡುವ

ಪರಮಾತ್ಮನ ನಿರ್ವ್ಯಾಜ ಕಾರುಣ್ಯ ಅಸದಳ. ಪರಮಾತ್ಮನ ''ಬಹುಚಿತ್ರಜಗತ್ ಬಹುದಾಕರಣಾತ್ ಪರಶಕ್ತಿರನಂತಗುಣಃ ಪರಮಃ'' ಇಂಥಾ ಪರಮಾತ್ಮನ ಅದ್ಭುತ ಕಾರ್ಯ ತಿಳಿಸಿಕೊಡುವ ಅವನನ್ನು ಅನಂತಕಾಲದಿಂದಲೂ ಹೊಗಳುತ್ತಿರುವ ಅಪೌರುಷೇಯ ಶಬ್ದರಾಶಿ ವೇದ. ಇಂಥಾ ವೇದಾರ್ಥವನ್ನು ಸಜ್ಜನರು ತಿಳಿದು ಉದ್ಧಾರವಾಗಲಿ ಎಂಬ ಉದ್ದೇಶದಿಂದ ವೇದವ್ಯಾಸರೂಪದಿಂದ ಅವತರಿಸಿ ಬ್ರಹ್ಮಮೀಮಾಂಸಶಾಸ್ತ್ರವನ್ನು ರಚಿಸಿ,ವೇದಾರ್ಥಬೃಂಹಿತವಾದ ಅಷ್ಟಾದಶಪುರಾಣಾದಿಗಳು, ಪಂಚಮವೇದವೆಂದು ಕರೆಸಿಕೊಂಡಿರುವ ಭಾರತ, ''ನಿಗಮಕಲ್ಪತರೋರ್ಗಲಿತಂ ಫಲಂ ಶುಕಮುಖಾದಮೃತದ್ರವಸಂಯುತಂ' ಎಂಬ ಭಾಗವತಶಾಸ್ತ್ರರಚಿಸಿದ್ದಾನೆ. ಅಷ್ಟೇ ಅಲ್ಲ, ಸ್ವಾಮಿಯು ತಾನೇ ರಾಮ, ಕೃಷ್ಣ, ದತ್ತ, ಕಪಿಲ, ಹಯಗ್ರೀವಾದಿ ನಾನಾರೂಪಗಳನ್ನು ತೆಗೆದುಕೊಂಡು ಸಜ್ಜನಸಮುದಾಯದ ಉದ್ಧಾರಾರ್ಥವಾಗಿ ಅವತರಿಸಿದ್ದಾನೆ. ಮತ್ತು ಪ್ರಾಣಾದಿ ದೇವತಾ ಸಮುದಾಯವನ್ನು ಆಜ್ಞಾಪಿಸಿ ಸಜ್ಜನರಿಗೆ ಜ್ಞಾನಸಂಪತ್ತಿಗೆ ಕಾರಣವಾಗಲೆಂದು ಹನುಮ, ಭೀಮ, ಮಧ್ವಾದಿ ರೂಪಗಳಿಗೂ ಕಾರಣವಾಗಿದ್ದಾನೆ. ಇಷ್ಟೆಲ್ಲಾ ಮಾಡಿರುವುದು ಯಾರಿಗಾಗಿ? ಹಿಂದೆ ಹೇಳಿದಂತೆ, ಜ್ಞಾನೇಚ್ಛಾಪ್ರಯತ್ನಶೂನ್ಯವಾದ ಜಡಕ್ಕಂತೂ ಅಲ್ಲ. 'ತೇಷಾಂ ದುಃಖ ಪ್ರಹರಣಾಯ ಶ್ರುತಿರೇಷಾ ಪ್ರವರ್ತತೇ' ಎಂದು ಹೇಳಿದಂತೆ ಸಂಸಾರ ಸಾಗರದಲ್ಲಿ ಮುಳುಗಿ ಕ್ಲೇಶ ಪಡುತ್ತಿರುವ ಸಜ್ಜನಸಮುದಾಯದ ಉದ್ಧಾರಾರ್ಥವಾಗಿಯೇ ಜೀವರನ್ನು ವಿಧಿನಿಷೇಧ ರೂಪ ಶಾಸ್ತ್ರಕ್ಕೆ ವಿಷಯರನ್ನಾಗಿ ಮಾಡಿದ್ದಾನೆ. ಸ್ವಸ್ವರೂಪಾನಂದರೂಪ ಮೋಕ್ಷಾರ್ಥವಾಗಿಯೇ ಜೀವರನ್ನು ಶಾಸ್ತ್ರಕ್ಕೆ ವಿಷಯರನ್ನಾಗಿ ಮಾಡಿ ಜ್ಞಾನ, ಇಚ್ಛಾದಿಗಳನ್ನು ಹುಟ್ಟಿಸಿ ಪ್ರಯತ್ನವನ್ನು ಮಾಡಿಸುತ್ತಾನೆ. ಫಲಗಳಿಗೆ ಭಾಗಿಗಳನ್ನಾಗಿ ಮಾಡಿ ಮೋಕ್ಷವನ್ನು ಕೊಡುತ್ತಾನೆ. ''ಮೋಕ್ಷದಸ್ತು ಜನಾರ್ದನಃ'' ಎಂದಿದೆ.

17))ಶಂಕೆ :- ತತ್ತ್ವಾಭಿಮಾನಿಗಳ ಕಾರ್ಯವೇನು?

ಉತ್ತರಃ- ರಮಾಬ್ರಹ್ಮಾದಿಗಳು ಮೊದಲುಗೊಂಡು ಪುಷ್ಕರಾಂತದೇವತೆಗಳೆಲ್ಲಾ ತಾತ್ತ್ವಿಕ ಯೋಗಿಗಳೆಂದು ಕರೆದಿದ್ದಾರೆ. ಯದ್ಯಪಿ ತತ್ವಗಳು ಇಪ್ಪತ್ತನಾಲ್ಕು ಬ್ರಹ್ಮಾಂಡದ ಹೊರಗೇ ಸೃಷ್ಟವಾದವು. ಅವುಗಳ ಅಧಿಪತಿಗಳೇ ತತ್ತ್ವಾಭಿಮಾನಿಗಳು. ಆದರೂ ಆ ಇಪ್ಪತ್ತನಾಲ್ಕು ತತ್ವಗಳೇ ಸಂಸೃಷ್ಟವಾಗಿ ಬ್ರಹ್ಮಾಂಡದ ಒಳಗೂ ಇದ್ದು ಅವುಗಳಿಗೆ ಅವಾಂತರಅಭಿಮಾನಿತ್ವಸಂಪಾದಿಸಿರುವುದರಿಂದ ಪುಷ್ಕರಾಂತ ಎಲ್ಲರನ್ನೂ ತಾತ್ತ್ವಿಕಯೋಗಿಗಳೆಂದು ಹೇಳುತ್ತಾರೆ. ಇವರೆಲ್ಲರೂ ಅಸ್ವತಂತ್ರರೇ ಪರಮಾತ್ಮನ ಆಜ್ಞಾಧಾರಕರು. ಅಸ್ವತಂತ್ರ ಜೀವಸಮುದಾಯದಲ್ಲಿ ಅತ್ಯಂತಶ್ರೇಷ್ಠಳು ರಮಾದೇವಿಯರು. ನಿತ್ಯಮುಕ್ತಳು, ಸರ್ವದೋಷವಿವರ್ಜಿತಳು, ನಿತ್ಯಾವಿಯೋಗಿನಿ ದೇವಿ. ಅವಳಿಗೆ ಸಂಸಾರ ಬಂಧವಿಲ್ಲ. ಆದ್ದರಿಂದಲೇ ವಿಧಿನಿಷೇಧಬದ್ಧಳಲ್ಲ. ಜ್ಞಾನಪೂರ್ತಿ ಆಗಿಹೋಗಿದೆ. ಆದರೆ ಸಮುದ್ರ ತರಂಗಗಳಂತೆ ಅವೇ ಹೊಸ ಹೊಸದಾಗಿ ವಿಶೇಷ ಮಹಿಮೆಯಿಂದ ಅವಳಿಗೆ ಭೋಗದಾಯಕವಾಗಿವೆ. ಸರ್ವದೇಶ, ಸರ್ವಕಾಲದಲ್ಲಿ ಆತನ ಸರ್ವರೂಪಗಳೊಂದಿಗೆ ವ್ಯಾಪ್ತಿಯಿದ್ದು 'ಸಮಾಸಮಳು' ಎನ್ನಿಸುತ್ತಾರೆ. ಆದರೆ ಹರಿಯಿಂದ ಅನಂತಾನಂತಗುಣಾಧಮಳು. ಪರಮಾತ್ಮೈಕಾಧಿೀನಳೂ.'ಅನಾಲೋಚನಯಾ ಸರ್ವವಿಷಯಕಂ ಜ್ಞಾನಂ ರಮಾಜ್ಞಾನಂ' . ಆದರೆ ಅವಳೂ ಸಹ ದೇವರ ಗುಣಾನಂತ್ಯ ಸಾಕಲ್ಯೇನ ತಿಳಿಯಲಾರಳು. ಹಿಂದೆ ಹೇಳಿದಂತೆ ಪರಮಾತ್ಮನ ಆಜ್ಞೆಯಿಂದಲೇ ಶ್ರೀಭೂದುರ್ಗಾನಾಮದಿಂದ ತ್ರಿಗುಣಾಭಿಮಾನಿ ಮಾಯಾನಾಮಕಳೂ, ಜೀವರ ಸ್ವರೂಪಕ್ಕೆ ಆವರಣಭೂತವಾದ ಜೀವಾಚ್ಛಾದಿಕ, ಪರಮಾಚ್ಛಾದಿಕ, ಅವಿದ್ಯಾ, ಕಾಮ, ಕರ್ಮ, ಲಿಂಗ ಶರೀರಾದಿ ಗಳಿಗೆ ಅಭಿಮಾನಿಯಾಗಿ, ಅವುಗಳನ್ನು ನಿಮಿತ್ತಮಾಡಿಕೊಂಡು ಜೀವರ ಬಾಹ್ಯವಾದ ಅಂತಃಕರಣದಲ್ಲಿ ಇದ್ದು ಜೀವರಿಗೆ ತಮ್ಮ ದೇಹೇಂದ್ರಿಯಾದಿಗಳಲ್ಲಿ ಅಧಿಕವ್ಯಾಮೋಹವನ್ನು ಉಂಟುಮಾಡಿ 'ಈ ದೇಹ ನನ್ನದು, ಇಂದ್ರಿಯಗಳು ನನ್ನವು, ಹೆಂಡರು,ಮಕ್ಕಳು ಬಂಧುಗಳು ನನ್ನ ಹಿತಚಿಂತಕರು' ಎಂದು ಅಹಂತಾ, ಮಮತಾ ರೂಪ ಅಭಿಮಾನಗಳು, ಮಮತೆಗಳು, ಅಹಂಕಾರಗಳಿಗೆ ಕಾರಣಳಾಗುತ್ತಾಳೆ. ಹಾಗೆಯೇ ಜೀವನಿಗೆ ಸ್ವಾತಂತ್ರ್ಯವಿಲ್ಲ ದಿದ್ದರೂ ನಾನು ಸ್ವತಂತ್ರನೆಂದೂ, ಅಲ್ಪಜ್ಞನಾಗಿದ್ದರೂ ಬಹುಜ್ಞನೆಂದೂ, ಅತ್ಯಂತ ಬಲಹೀನನಾದರೂ ಸರ್ವಶಕ್ತನೆಂದೂ ಇವೇ ಮೊದಲಾದ ನಾನಾವಿಭ್ರಮಗಳನ್ನು ಉಂಟುಮಾಡುತ್ತಾಳೆ. ''ಮಮ ಮಾಯಾ ದುರತ್ಯಯಾ' ಎಂದು ಗೀತಾ. ಶ್ರೀಹರಿಯ ಇಚ್ಛೆಯಿಂದಲೇ ಎಲ್ಲಾ ತತ್ತ್ವಾಭಿಮಾನಿದೇವತೆಗಳನ್ನೂ , ಇತರರನ್ನೂ , ನಿಯಮಿಸುತ್ತಾಳೆ. ಪರಮಾತ್ಮನ ಸೃಷ್ಟ್ಯಾದಿಕಾರ್ಯಗಳಲ್ಲಿ ತಾನೂ ಜೊತೆ ಜೊತೆಗೆ ಪಾಲ್ಗೊಂಡು ಎಲ್ಲರನ್ನೂ ನಿಯಂತ್ರಿಸುತ್ತಾಳೆ. ಪರಮಾತ್ಮನ ಇಚ್ಛಾವನ್ನು ಸ್ಪಷ್ಟವಾಗಿ ತಿಳಿದು ತಾನೂ ಅದರಂತೆ ನಡೆದುಕೊಳ್ಳುತ್ತಾಳೆ.

'' ಯಾಂ ಯಾಂ ಪರೇಶ ಉರುಧೈವ ಕರೋತಿ ಲೀಲಾಂ ತಾಂ ತಾಂ ಕರೋತ್ಯನು ತಥೈವ ರಮಾಽಪಿ ದೇವೀ।
ನೈತಾವತಾಽಸ್ಯ ಪರಮಸ್ಯ ತಥಾ ರಮಾಯಾಃ ದೋಷೋಽಣುರಪ್ಯನುವಿಚಿಂತ್ಯ ಉರುಪ್ರಭೂಯಾತ್॥
ಕ್ವಾಜ್ಞಾನಮಾಪದಪಿ ಮಂದಕಟಾಕ್ಷಮಾತ್ರಾತ್ ಸರ್ಗಸ್ಥಿತಿಪ್ರಲಯಸಂಸೃತಿ ಮೋಕ್ಷಹೇತೋಃ।
ದೇವ್ಯಾ ಹರೇಃ ಕಿಮುವಿಡಂಬನಮಾತ್ರಮೇತತ್ ವಿಕ್ರೀಡಿತೋ ಸುರನರಾದಿವದೇವ ತಸ್ಮಾತ್॥

----ನಿರ್ಣಯ 5.35-36

ಹೀಗೆ ಪರಮಾತ್ಮನ ಆಜ್ಞೆಯನ್ನನುಸರಿಸಿ ಜೀವರುಗಳಿಗೆ ಬಂಧಕಗಳಾದರೂ ಅವಳ ಅನುಗ್ರಹದಿಂದಲೇ ಜೀವರುಗಳು ಮೋಕ್ಷಾದಿ ಪುರುಷಾರ್ಥಗಳನ್ನು ಪಡೆದು ಸ್ವರೂಪಾನಂದ ಭೋಗಿಗಳಾಗುತ್ತಾರೆ. ''ನಿತ್ಯದಲಿ ಆನಂದ ಸುಖವನೀವಳು ರಮಾ''.

ಶ್ರೀಲಕ್ಷ್ಮಿಯನಂತರ ಬ್ರಹ್ಮವಾಯುಋಜುಯೋಗಿಗಳು ತತ್ತ್ವಾಭಿಮಾನಿಗಳಾಗಿದ್ದಾರೆ. ಇವರಿಗೆ ಲಿಂಗ ದೇಹವಿದ್ದರೂ ದಗ್ಧಪಟಾಯಮಾನರೂಪದಲ್ಲಿದ್ದು (ಸುಟ್ಟಲ್ಪಟ್ಟ ಬಟ್ಟೆಯೋಪಾದಿಯಲ್ಲಿ) ಬಂಧಕವನ್ನು ಉಂಟುಮಾಡುವುದಿಲ್ಲ. ಜೀವರುಗಳಂತೆ ಸಂಸಾರಬಂಧವು ಇಲ್ಲ. ಅನಾದಿಕಾಲದಿಂದಲೂ ಸರ್ವದೋಷದಿಂದ ಬಿಡಲ್ಪಟ್ಟವರು. ಕೇವಲ ಲಕ್ಷ್ಮೀನಾರಾಯಣರಿಗೆ ಅಧೀನರು. ಯಾವಾಗಲೂ ಪರಮಾತ್ಮನ ಇಚ್ಛಾವರ್ತಿಗಳಾಗಿರುತ್ತಾರೆ. ಎಂದಿಗೂ ಪರಮಾತ್ಮನಿಗೆ ವಿರೋಧವನ್ನು ಮನಸ್ಸಿನಲ್ಲಿಯೂ ಮಾಡರು. ಎಲ್ಲಾ ತತ್ತ್ವಾಭಿಮಾನಿ ದೇವತೆಗಳಿಗೂ ಅಧಿಪತಿಗಳು. ಅವರನ್ನು ಪರಮಾತ್ಮ ಇಚ್ಛೆಯನ್ನು ಅನುಸರಿಸಿ ಪ್ರೇರಣಾಕಾರ್ಯದಲ್ಲಿ ನಿಯಂತ್ರಿಸುತ್ತಾರೆ.ಎಲ್ಲಾ ತತ್ತ್ವಾಭಿಮಾನಿ ದೇವತೆಗಳಿಗೂ, ಹಾಗೂ ಮುಕ್ತಿಯೋಗ್ಯ ಜೀವರಿಗೂ ಮೂಲಗುರುಗಳು. ಇವರ ಅನುಗ್ರಹ ಸಂಪಾದಿಸದೆ ಮುಕ್ತಿಯಿಲ್ಲ. ''ಸ ಏನಾಂ ಬ್ರಹ್ಮಗಮಯತಿ'' ಎಂದು ಶೃತಿ. ಅಸುರಾವೇಶಾದಿಗಳು ಯಾವುದೂ ಇವರಿಗಿಲ ವಾದ್ದರಿಂದ ಯಾವ ಪಾಪಕಾರ್ಯವನ್ನೂ ಎಸಗರು. ಇನ್ನು ಶೇಷಾದಿ ಸರ್ವತತ್ತ್ವಾಭಿಮಾನಿ ದೇವತೆಗಳು ಉಚ್ಚನೀಚ ಸ್ವಭಾವವುಳ್ಳವರಾಗಿ ತಾರತಮ್ಯೋಪೇತರು. ಚಿಕ್ಕವರನ್ನ ದೊಡ್ಡವರು ನಿಯಂತ್ರಣ ಮಾಡುತ್ತಾರೆ. ಇವರೆಲ್ಲರೂ ಮೂಲಭೂತವಾಗಿ ಸ್ವತಂತ್ರಪುರುಷ ಶ್ರೀಹರಿಯಿಂದ ನಿಯಂತ್ರಣಕ್ಕೆ ಒಳಪಟ್ಟವರು. ಎಲ್ಲರೂ ವಿಧಿಬದ್ಧರು. ಅಸ್ವತಂತ್ರಕರ್ತೃಗಳು. ತತ್ತ್ವಾಭಿಮಾನಿಗಳ ನಂತರ ಋಷಿಗಳು, ಗಂಧರ್ವರು, ಪಿತೃಗಳು, ಚಕ್ರವರ್ತಿಗಳು ಮತ್ತು ಮನುಷ್ಯೋತ್ತಮರು. ಇವರೆಲ್ಲರೂ ಮುಕ್ತಿಯೋಗ್ಯರು. ತಾರತಮ್ಯೋಪೇತರು. ಸಂಸಾರ ಪ್ರಾಪಕ ದೋಷಗಳೂ ಸಹ ತಾರತಮ್ಯೋಪೇತವಾಗಿವೆ. ತತ್ತ್ವಾಭಿಮಾನಿ ದೇವತೆಗಳು ತಾವು ಏನು ತತ್ತ್ವಗಳಲ್ಲಿ ಸ್ಥಿತರಾಗಿ ಜೀವರನ್ನು ನಿಯಮನ ಮಾಡುತ್ತಾರೆಯೋ ಅದಕ್ಕೆ ಅವರೇ ಮುಖ್ಯಫಲಭಾಗಿಗಳು. ಜೀವರಿಗಿಲ್ಲ. ಅವರು ಅಲ್ಪ

ಫಲಭಾಗಿಗಳು. ತತ್ತ್ವಗಳ ಸ್ವಾಮಿತ್ವವೂ ತಾರತಮ್ಯಾನುಕ್ರಮವಾಗಿ ಇರುವುದರಿಂದ ಫಲಭೋಗದಲ್ಲೂ ತಾರತಮ್ಯವಿರುತ್ತದೆ. ಲೋಕದಲ್ಲಿ ಹೇಗೆ ಕೃಷಿ, ವ್ಯಾಪಾರ ಮುಂತಾದ ಕಾರ್ಯವನ್ನು ಮಾಡುವಾಗ ಭೃತ್ಯರಿಗಿಂತಲೂ, ಯಜಮಾನರಿಗೆ ಹೆಚ್ಚುಫಲವೋ ಹಾಗೆಯೇ ಜೀವರುಗಳಿಗಿಂತಲೂ ಅವರಲ್ಲಿ ನಿಂತು ತತ್ತ್ವಗಳನ್ನು ನಿಯಮನಮಾಡುವ ತತ್ತ್ವಾಭಿಮಾನಿಗಳಿಗೇ ಹೆಚ್ಚು ಫಲವು. ಜೀವರುಗಳಲ್ಲಿ ತತ್ತ್ವಾಭಿಮಾನಿದೇವತೆಗಳಿಗಿರುವಂತೆ ತತ್ತ್ವಾಭಿಮಾನಿ ದೈತ್ಯರೂ ಇದ್ದು ಪ್ರೇರೇಪಿಸುತ್ತಾರೆ. ದೇವತೆಗಳು ಶುಭಕರ್ಮವನ್ನು ಪ್ರೇರೇಪಿಸಿದರೆ, ದೈತ್ಯರು ಅಶುಭಕರ್ಮ ಪ್ರೇರಕರಾಗಿರುತ್ತಾರೆ. ಶುಭಕರ್ಮಪ್ರೇರಕ ಫಲವನ್ನು ದೇವತೆಗಳೂ ಅಶುಭಕರ್ಮಪ್ರೇರಕ ಫಲವನ್ನು ದೈತ್ಯರೂ ತಾರತಮ್ಯಾನುಸಾರ ಪಡೆಯುತ್ತಾರೆ. ಅಧಿಷ್ಠಾನಭೂತರಾದ ಜೀವರುಗಳು ಶುಭಾಶುಭ ಎರಡರ ಫಲಕ್ಕೂ ಭಾಗಿಗಳು. ಜೀವರುಗಳು ಮಾಡಿದ ಕರ್ಮಫಲವು ದೇವತೆಗಳಿಗೆ ಬರುವುದಕ್ಕೆ ಅವರ ಸ್ವಾತಂತ್ರ್ಯ (ಪ್ರೇರಕತ್ವ- ಸ್ವಾಮಿತ್ವ) ವೇ ಕಾರಣವು. ಪ್ರೇರಕತ್ವ-ಸ್ವಾತಂತ್ರ್ಯ-ಸ್ವಾಮಿತ್ವ ಎಂಬ ಶಬ್ದಗಳಿಂದ ನಿರೂಪಿತ ಪ್ರಮೇಯವು ದೇವಾದಿಗಳಲ್ಲಿ ತಾರತಮ್ಯದಲ್ಲಿಯೇ ಇರುವುದರಿಂದ ತಾರತಮ್ಯದಿಂದಲೇ ಫಲವೂ ಬರುತ್ತದೆ. ಕೆಲವೊಮ್ಮೆ ದೇವತೆಗಳು ಜೀವರುಗಳನ್ನು ಪಾಪಕರ್ಮದಲ್ಲಿಯೂ ಪ್ರೇರಣೆ ಮಾಡಿದರೂ, ಅದು ಪರಮಾತ್ಮನ ಆಜ್ಞೆಯಿಂದ ಅವನ ಪೂಜಾರೂಪವಾಗಿ ಮಾಡುವರಾದ್ದರಿಂದ ಅವರಿಗೆ ಶುಭಫಲವೇ ಬರುತ್ತದೆ. ಪಾಪಫಲಬರದು. ಅದು ಪರಂಪರಯಾ ದೈತ್ಯರಿಗೇ ಹೋಗುತ್ತದೆ. ದೇವತೆಗಳು ಜೀವರ ದೇಹವನ್ನು ಪ್ರವೇಶಿಸಿ, ಅವರನ್ನು ಪ್ರೇರಿಸಿ ಅವರಿಂದ ಸಾಧನಾನುಷ್ಠಾನ ಮಾಡಿಸಿ, ಅವರಿಗೆ ಜ್ಞಾನ, ಭಕ್ತಿ, ವೈರಾಗ್ಯಾದಿಗಳನ್ನು ಹುಟ್ಟಿಸಿ; ಭಗವಂತನ ಪ್ರಸಾದಾನಂತರ ಅಪರೋಕ್ಷಕ್ಕೆ ಕಾರಣರಾಗುವುದರಿಂದ ಮುಖ್ಯವಾಗಿ ಜ್ಞಾನಫಲ ಅವರಿಗೇ ಆಗಿ ಮೋಕ್ಷದಲ್ಲಿ ಅವರಿಗೆ ಆನಂದಾತಿಶಯಕ್ಕೂ ಕಾರಣವಾಗುತ್ತೆ. ಹೀಗಿರಲು ಪಾಪದ ಫಲ ದುಃಖಾದಿಗಳು ಬರುವುದೇ ಇಲ್ಲ. ತಮ್ಮ ಯೌಗಿಕ ಶಕ್ತಿಯಿಂದ ಜೀವರಲ್ಲಿದ್ದರೂ ದುಃಖಾದಿಗಳು ಅಂಟದಂತೆ ಇರುತ್ತಾರೆ. ಮುಖ್ಯವಾಗಿ ತಿಳಿಯಬೇಕಾದ ವಿಷಯವೇನೆಂದರೆ, ವಿಧಿನಿಷೇಧಗಳೆಲ್ಲವೂ ಭಗವಂತನ ಆಜ್ಞಾರೂಪವಾದರೂ, ಭಕ್ತಿಯೋಗಿಗಳಾದ ತತ್ತ್ವೇಶರುಗಳು ತಾವು ಏನು ಪ್ರೇರಣಾದಿ ಕಾರ್ಯವನ್ನು ಮಾಡುತ್ತಾರೋ ಅದೆಲ್ಲವೂ ಪರಮಾತ್ಮನ ಶಾಸನಾನುಸಾರ ಮಾಡತಕ್ಕವರಾಗಿ ಹರಿಪೂಜಾತ್ವೇನ ಮಾಡತಕ್ಕವರಾದ್ದರಿಂದ ಅವರು ಪಾಪಕರ್ಮದಲ್ಲಿ ಜೀವನನ್ನು ಪ್ರೇರಿಸಿದರೂ, ಪುಣ್ಯವೇ ಸಂಪಾದನೆಯಾಗಿ ಸ್ವಯೋಗ್ಯ ಅಪರೋಕ್ಷವನ್ನೇ ಹೊಂದುತ್ತಾರೆ. ಹಾಗೆಯೇ ವಿಷ್ಣುವೈಷ್ಣವ ದ್ವೇಷದಿಂದ ಮಾತ್ಸರ್ಯಯುತರಾಗಿ ದೈತ್ಯರುಗಳು ಜೀವನನ್ನು ಅಧಮಮಾರ್ಗಕ್ಕೆ ತಳ್ಳುವವರಾಗಿ ದ್ದರಿಂದ ಅವರಿಗೇ ಹೆಚ್ಚು ದುಃಖಫಲವು ಕಡೆಗೆ ನಿತ್ಯನರಕವಾದ ಅಂಧಃತಮಸ್ಸು ಆಗುತ್ತದೆ. ದೇವತೆಗಳು ಜೀವನಲ್ಲಿದ್ದು ತಾವು ಮಾಡುವ ಕಾರ್ಯವು ಅವರ ಸಾಧನದ ಒಂದು ಅಂಗವೇ ಆಗಿದೆ. ಒಟ್ಟಿನಲ್ಲಿ ಅಸ್ವತಂತ್ರರಾದರೂ ಜೀವರುಗಳಿಗೆ ಕರ್ತೃತ್ವವಿದೆ. ವಿಧಿನಿಷೇಧಗಳಿಗೆ ಬದ್ಧರು. ಅವರ ಯೋಗ್ಯತೆಗೆ ಅನುಗುಣವಾಗಿ ಫಲವೂ ಸಿಗುತ್ತದೆ. ಆದ್ದರಿಂದ ಚೇತನಸ್ವರೂಪಿಗಳಾದ ನಾವುಗಳು ಶಾಸ್ತ್ರದ್ವಾರಾ ವಿಧಿನಿಷೇಧಗಳನ್ನು ತಿಳಿದು ಸ್ವವರ್ಣಾಶ್ರಮೋಚಿತವಾದ ಕರ್ತವ್ಯಕರ್ಮವನ್ನು ತಿಳಿದು ಅದರಂತೆ ಯಥಾಶಕ್ತಿ ಅಥವಾ ಶಕ್ತಿಮೀರಿಯೂ ಸಹ ಅತ್ಯಂತ ಪ್ರಯತ್ನದಿಂದ ವಿಷ್ಣುಪೂಜಾತ್ವೇನ ಸ್ವಯೋಗ್ಯಕರ್ಮಗಳನ್ನು ಮಾಡಿ ಫಲಾಫಲಗಳನ್ನು ಪರಮಾತ್ಮನ ಪಾದಾರವಿಂದದಲ್ಲಿ ಅರ್ಪಿಸಿ ಅವನ ಅನುಗ್ರಹಸಂಪಾದಿಸಬೇಕು.

‘‘ಯಜ್ಞಾರ್ಥಾತ್ ಕರ್ಮಣೋ ಅನ್ಯತ್ರ ಲೋಕೋಽಯಂ ಕರ್ಮಬಂಧನ।
ತದರ್ಥ ಕರ್ಮ ಕೌಂತೇಯ ಮುಕ್ತಸಂಗಃ ಸಮಾಚರ॥ ಎಂದಿದೆ ಗೀತಾ.

॥ಇತಿ ಶಂ॥

ಶ್ರೀಭಾರತೀರಮಣೋಮಧ್ವೋ ಸೃಷ್ಟಿಸ್ಥಿತ್ಯಂತಕಾರಕಃ।
ವಾಸುದೇವಾಜ್ಞಯಾ ನಿತ್ಯಂ ದುಷ್ಟಾನಾಂ ಪ್ರಾಣಘಾತಕಃ॥
ಶರ್ವಾದಿಸರ್ವಗೀರ್ವಾಣ ನಿರ್ವಾಣಗತಿಹೇತವಃ।
ಪೂರ್ಣಪ್ರಜ್ಞಪದಾಂಭೋಜಪಾಂಸವಃ ಪಾತು ನಸ್ಸದಾ॥

ಶ್ರೀ ಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀನರಹರಿರಾಮಕೃಷ್ಣವೇದವ್ಯಾಸಾತ್ಮಕ
ಶ್ರೀಲಕ್ಷ್ಮೀಹಯಗ್ರೀವಾತ್ಮಕ ಶ್ರೀಕೃಷ್ಣಾರ್ಪಣಮಸ್ತು॥

ಶ್ರೀ ವೃಷನಾಮಸಂವತ್ಸರದ ಆಷಾಢ ಶುಕ್ಲ ಚತುರ್ದಶಿ॥ 4/6/2001

(ತುಮಕೂರಿನ ಶ್ರೀಕೆ.ಎಸ್. ರಾಮರಾಯರು- ರಿಟೈರ್ಡ ಪೋಸ್ಟಮಾಸ್ಟರ್ ಸಂಗ್ರಹಿಸಿದ್ದು)